Mr. SPEAKER.—Late lamented Syam Prasad Mookherjee was a noble and courageous son of India. He was an eminent educationist. He was the Vice-Chancellor of the Calcutta University for some years. He was also, as pointed out by the Leader of the House, the Finance Minister of Bengal for some time. He was a member of the Bengal Assembly for several years. When he became the Minister for Industries and Supply in the Central Government, he made a mark of his life. We Indians are grateful to him for his distinguished service to the country and the people. He was a great fighter and great orator. He was the President of several institutions which were rendering very great service to humanity and to the people of the country. I feel it is my duty to associate myself with the sentiments expressed by the Leader of the House and the Leader of the Opposition and also Sri Mulka Govinda Reddy. As a mark of respect to the departed soul, I request the House to stand for two minutes.

(The House stood up in silence for two minutes).

Mr. SPEAKER.—We have ten minutes more. The same Bill may be discussed. Of course, it is understood that it will continue tomorrow also. One or two Members may make use of this time to speak on the Bill.

(No Hon'ble Member rose).

Mr. SPEAKER.—I now call upon Sri Rachiah and Sri Madappa to move their adjournment motions.

MOTION FOR ADJOURNMENT.

The loss and distress caused on account of heavy floods in Cauvery and Kapila.

Sri B. RACHIAH (Yelandur—Scheduled Castes).—Sir, I beg to move the following adjournment motion which runs as follows :

> " This House do stand adjourned to discuss a definite matter of urgent public importance and of recent occurrence, namely, the damages, loss and distress caused to the people on account of heavy flood of rivers Cauvery and Kapini from 6th to 8th instant."

ಸ್ವಾಮಿ, ಕಳೆದ ಮೂರು ನಾಲ್ಕು ವರ್ಷಗಳಿಂದಲೂ ಚಾಮರಾಜನಗರ, ಟಿ.ನರಸೀಪುರ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಹೆಚ್ಚು ಮಳೆಯಿಲ್ಲದೆ ಅದೊಂದು ಕ್ಷಾಮಪೀಡಿತ ಪ್ರದೇಶವಾಗಿ ನಮಗೆ ಕಂಡುಬಂದಿದ್ದರೂ ಕೂಡ ಈ ವರ್ಷ ತುಂಬ ಮಳೆ ಬಂತು. ಇದರಿಂದ ಒಂದುಕಡೆ ಸಂತೋಷವಿದ್ದರೂ ಕೂಡ ಹೆಚ್ಚಿನ ಪ್ರವಾಹದಿಂದ ಟಿ.ನರಸೀಪುರದ ತಾಲ್ಲೂಕಿನ ಕೆಲವು ಊರುಗಳಲ್ಲಿ ಮನೆಮಠಗಳು, ದನಕರುಗಳು, ದವಸಧಾನ್ಯಗಳು, ಹುಲ್ಲು ಮೆದೆಗಳು ಆದಿಯಾಗಿ ಸಾವಿರಾರು ರೂಪಾಯಿ ಬೆಲೆ ಬಾಳುವ ವಸ್ತುಗಳು ನಷ್ಟವಾಗಿವೆ. ಇದು ಸರ್ಕಾರದವರು ತಪ್ಪೋ ಸಾರ್ವಜನಿಕರ ತಪ್ಪೋ ಎಂದು ಯಾರನ್ನೂ ನಿಂದಿಸುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಇದೊಂದು 'Act of God' ಎಂದು ಹೇಳಬಹುದು. ಇದನ್ನು ಯಾರೂ ಕಂಡವರಿಲ್ಲ. ಆದರೂ ಕೂಡ ಆ ಪ್ರದೇಶದಲ್ಲಿ ದುರಂತಕ್ಕೊಳಗಾದ ಜನರಿಗೆ ಸರ್ಕಾರ ಎಷ್ಟುಮಟ್ಟಿಗೆ ಸಹಾಯವನ್ನು ನೀಡಿದೆ ಎಂಬ ವಿಷಯವನ್ನು ಚರ್ಚಿಸುವುದಕ್ಕಾಗಿ ನಾನು ಈ ನಿಲುವಳಿ ಸೂಚನೆಯನ್ನು ಸಭೆಯಮುಂದೆ ತರಬೇಕಾಗಿ ಬಂತು. ಸಂಸ್ಥಾನದ ಮುಖ್ಯ ಮಂತ್ರಿಗಳು, ಉಳಿದ ಮಂತ್ರಿಗಳು, ಎಂದರೆ ಆರೋಗ್ಯ ಸಚಿವರೂ ಮತ್ತು ವಿದ್ಯಾ ಸಚಿವರೂ 8ನೆಯ ತಾರೀಖು ಟಿ.ನರಸೀಪುರ ತಾಲ್ಲೂಕಿಗೆ ಬಂದು ಜನರಿಗೆ ಸಾಕಷ್ಟು ಸಹಾಯವನ್ನು ನೀಡುತ್ತೇವೆಂದು ಭರವಸೆಯನ್ನೇನೋ ಕೊಟ್ಟುಬಂದರು. ಆದರೆ ಅಲ್ಲಿ ಎಷ್ಟು ನಷ್ಟವಾಗಿದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಇನ್ನೂ ತರಿಸಿಕೊಳ್ಳದೇ ಇರುವುದು ಶೋಚನೀಯವಾದ ವಿಚಾರ. ಎಷ್ಟು ನಷ್ಟವಾಗಿದೆ, ಇದಕ್ಕೆ ಎಷ್ಟುಮಟ್ಟಿನ ಪರಿಹಾರ ಕೊಡಬೇಕು ಎಂಬ ವಿಷಯವನ್ನು ತಿಳಿಯಲು ಅಂಕಿ ಅಂಶಗಳನ್ನು ಪಡೆಯಲು ಕೂಡಲೇ ಕಾರ್ಯಕ್ರಮ ಕೈಕೊಂಡಿಲ್ಲ. ಕೂಡಲೇ ಇದನ್ನು ಕೈಕೊಳ್ಳಲು ಸರ್ಕಾರ ಪ್ರಯತ್ನ ಪಡಬೇಕೆಂದು ಈ ಮೂಲಕ ತಿಳಿಯಲಿಚ್ಛಿಸುತ್ತೇನೆ.

ತಲಕಾಡು ಆದಿಕರ್ಣಾಟಕ ಕಾಲೊನಿ, ಮಾಲಂಗಿ, ಕೆಂಡನಕೊಪ್ಪಲು, ಕಲಿಯೂರು, ನಿಲಸೋಗೆ, ದೊಡ್ಡಾಪುರ, ಕುಕ್ಕೂರು ಇನ್ನೂ ಕೆಲವು ಗ್ರಾಮಗಳಲ್ಲಿ ಮಣ್ಣುಗೋಡೆಗಳಿಂದ ಕಟ್ಟಿದ್ದ ಮನೆಗಳು ಕುಸಿದುಬಿದ್ದು ಅವರೆಲ್ಲರೂ ಹೊರಗೆ ಹೋಗಿದ್ದಾರೆ. ಇವರಿಗೆ ಸರ್ಕಾರದವರು ಮುನ್ನೂರು ರೂಪಾಯಿಗಳಂತೆ ಧನಸಹಾಯ ನೀಡಿ ಬೇರೆ ಎತ್ತರವಾದ ಸ್ಥಳಗಳಲ್ಲಿ ಮನೆಗಳನ್ನು ಕಟ್ಟಿಕೊಳ್ಳಲು ನಿವೇಶನಗಳನ್ನು ಕೊಡಬೇಕು; ಮತ್ತು ಅರಣ್ಯದಿಂದ ಮನೆ ಕಟ್ಟಿಕೊಳ್ಳಲು ಬೇಕಾದ ಮರಮುಟ್ಟುಗಳನ್ನು ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಅಲ್ಲಿ ಹೆಚ್ಚು ದವಸಧಾನ್ಯಗಳಿಲ್ಲದಿದ್ದರೂ ಇದ್ದ ಅಲ್ಪ ಸ್ವಲ್ಪ ಧಾನ್ಯವೂ ನೀರಿನಲ್ಲಿ ಕೊಚ್ಚಿಕೊಂಡು ಹೋಗಿರುವುದರಿಂದ ಅದನ್ನು ಸರ್ಕಾರ

(ಶ್ರೀ ಬಿ. ರಾಚಯ್ಯ.)

ಅವರಿಗೆ ಒದಗಿಸಿಲ್ಲ. ಅಲ್ಲದೆ ರೆಡ್‌ಕ್ರಾಸ್‌ನವರು ಕೂಡ ಬಂದು ಪರಿಹಾರ ಕೊಟ್ಟಿಲ್ಲ. ಆದಕಾರಣ ಸರ್ಕಾರ ಕ್ಷಾಮ ಪರಿಹಾರ ನಿಧಿಯಿಂದ ಸಹಾಯ ಕೊಡುವುದಲ್ಲದೆ ರೆಡ್‌ಕ್ರಾಸ್‌ನಿಂದ ಕೂಡ ಸಹಾಯ ನೀಡಬೇಕು. ಫಸಲು, ಎಂದರೆ, ನೆಲಗಡಲೆ, ಬತ್ತ, ಸೆಣಬು, ಎಳ್ಳು ಮುಂತಾದವು ನಷ್ಟವಾಗಿವೆ. ಕಪಿನಿ ಮತ್ತು ಕಾವೇರಿ ಎರಡರಿಂದ ನಷ್ಟವಾಗಿರುವುದನ್ನು ಲೆಕ್ಕಹಾಕಿದರೆ ಸುಮಾರು 50 ಸಾವಿರ ರೂಪಾಯಿಗಳಷ್ಟು ಫಸಲು ನಷ್ಟವಾಗಿದೆ. ಸರ್ಕಾರದವರು ಬೀಜದ ಧಾನ್ಯಗಳನ್ನು ಕೊಡಿಸುವುದಕ್ಕೆ ಏರ್ಪಾಡು ಮಾಡಿದ್ದಾರೆ. ಇಷ್ಟು ಕೊಡಿಸಿದರೆ ಸಾಲುವುದಿಲ್ಲ. ಕಷ್ಟಕ್ಕೊಳಗಾಗಿರುವವರಿಗೆ ಎಷ್ಟು ಬೇಕಾಗುತ್ತದೆಯೋ ಅಷ್ಟನ್ನೂ ಕೊಡಿಸಿ ಕೊಡಬೇಕೆಂದು ಸರ್ಕಾರದವರನ್ನು ನಾನು ಕೇಳಿಕೊಳ್ಳುತ್ತಿದ್ದೇನೆ.

4 P.M.

ಇನ್ನು ಬೇರೆಯದಾಗಿ ನಿವೇಶನಗಳ ವಿಚಾರ. ಆದರೆ ಜನರಿಗೆ ಎಷ್ಟರಮಟ್ಟಿಗೆ ನಿವೇಶನಗಳ ಬಗ್ಗೆ ಜಮೀನು ಕೊಡಲಾಗಿದೆಯೋ ಅದು ಗೊತ್ತಿಲ್ಲ. ಈ ಸಂದರ್ಭದಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಯಾರುಯಾರು ಅರ್ಜಿಗಳನ್ನು ಕೊಟ್ಟಿದ್ದಾರೋ ಅಂಥವರುಗಳಿಗೆಲ್ಲಾ ಬೇಗ ಅವರು ಮನೆಗಳನ್ನು ಕಟ್ಟಿ ಪೂರೈಸಿಕೊಳ್ಳಲು ಅನುಕೂಲವಾಗುವಂತೆ ತಾವು ಪರಿಹಾರಗಳನ್ನು ಒದಗಿಸಲಿ ಎಂಬ ಉದ್ದೇಶದಿಂದ ಈ ವಿಚಾರವನ್ನು ನಾನೀಗ ಈ ಸಭೆಯ ಅವಗಾಹನೆಗೆ ತರುವುದಕ್ಕೋಸ್ಕರ ಈ ನಿಲುವಳಿ ಸೂಚನೆ ತಂದಿರುತ್ತೇನೆ.

Mr. SPEAKER.—Motion moved:

"That this House do now stand adjourned."

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಕಾವೇರಿ ಮತ್ತು ಕಪಿಲಾ ಈ ಎರಡು ನದಿಗಳು ಎಲ್ಲೆಲ್ಲಿ ಹರಿಯುತ್ತವೆಯೋ ಆ ಪ್ರದೇಶದಲ್ಲಿ ನದಿಗಳ ಇಕ್ಕಡೆಗಳಲ್ಲಿಯೂ ಏನೇನು ಅನಾಹುತಗಳಾಗಿ ಎಷ್ಟೆಷ್ಟು ನಷ್ಟವಾಗಿದೆಯೆಂಬ ಅಂಶವನ್ನು ತಮ್ಮ ಮುಂದೆ ತರಬೇಕೆಂಬ ಉದ್ದೇಶದಿಂದ ನಾನೀಗ ಎದ್ದು ನಿಂತಿದ್ದೇನೆ—ಎಷ್ಟು ನಷ್ಟವಾಗಿದೆ ಎಂಬುದನ್ನು ಒಂದು ಪದದಲ್ಲಿಯಾಗಲೀ ಅಥವಾ ಒಂದು ಗಂಟೆಯ ಕಾಲಾವಕಾಶದಲ್ಲಿಯಾಗಲೀ ಹೇಳುವ ಸ್ಥಿತಿಯಲ್ಲಿ ನಾನು ಇಲ್ಲ. ಹಾಗೆ ಹೇಳುವುದಕ್ಕೆ ಸಾಧ್ಯವೇ ಇಲ್ಲವೆಂದು ನನ್ನ ಭಾವನೆ. ಈ ಸಂದರ್ಭದಲ್ಲಿ ಏನು ಕಷ್ಟನಷ್ಟಗಳಾಗಿವೆಯೆಂಬುದು ಅವುಗಳನ್ನು ಅನುಭವಿಸಿರುವವರಿಗೇ ಗೊತ್ತಿರುವಹಾಗೆ ಬೇರೆಯವರಿಗೆ ಗೊತ್ತಿರಲಾರದು. ಆದುದರಿಂದ ಎಷ್ಟು ನಷ್ಟವಾಗಿದೆಯೆಂಬುದನ್ನು ನಾನು ಇಲ್ಲಿ ನಿಂತು ಹೇಳುವುದಕ್ಕೆ ಕಷ್ಟವಾಗುತ್ತದೆ. ಆದುದರಿಂದ ಯಾವಯಾವ ಕಡೆ ಏನೇನು ನಷ್ಟ ಮತ್ತು ತೊಂದರೆಗಳಾಗಿರುತ್ತವೆಂಬುದನ್ನು ಪರಿಶೀಲಿಸಿ, ಆ ಬಗ್ಗೆ ಸರಿಯಾದ ಲೆಕ್ಕಗಳನ್ನು ಶೇಖರಣೆ ಮಾಡತಕ್ಕ ಬಗ್ಗೆ ಒಬ್ಬ ಸ್ಪೆಷಲ್ ಅಧಿಕಾರಿಗಳನ್ನು ನೇಮಕ ಮಾಡುವುದು ಉತ್ತಮವಾದುದೆಂದು ನನ್ನ ಭಾವನೆ. ಅಷ್ಟೇ ಅಲ್ಲದೆ ಹೀಗೆ ನಷ್ಟಕ್ಕೀಡಾಗತಕ್ಕ ಜನಗಳಿಗೆ ಯಾವಯಾವ ತರಹದಲ್ಲಿ ಪರಿಹಾರಗಳನ್ನು ಸರ್ಕಾರದವರು ನೀಡಬೇಕೆಂಬ ಅಂಶಗಳನ್ನು ಸಹ ಆಲೋಚನೆ ಮಾಡಿ ಬೇಗ ಒಂದು ತೀರ್ಮಾನಕ್ಕೆ ಬರತಕ್ಕದ್ದು ಸರ್ಕಾರದವರ ಮುಖ್ಯ ಕರ್ತವ್ಯವಾಗಿದೆ. ಅದಕ್ಕಾಗಿ ಬೇಗ ಒಂದು ಆಯಾ ಸ್ಥಳದ ಗಣ್ಯ ಮಹನೀಯರುಗಳಿಂದ ಕೂಡಿದ ಒಂದು ಸಮಿತಿಯನ್ನು ನೇಮಕ ಮಾಡಿ, ಅವರ ಸಲಹೆಯ ಪ್ರಕಾರ ಆ ನೊಂದ ಜನರಿಗೆ ಸರ್ಕಾರದವರು ಪರಿಹಾರವನ್ನು ನೀಡಬೇಕು.

ಜನರಿಗೆ ಯಾವಯಾವ ರೀತಿಯಲ್ಲಿ ಕಷ್ಟನಷ್ಟಗಳುಂಟಾಗಿವೆ ಎಂಬುದನ್ನು ಈಗಾಗಲೇ ಶ್ರೀ ಬಿ. ರಾಚಪ್ಪನವರು ತಿಳಿಸಿದ್ದಾರೆ. ಅವರು ತಿಳಿಸಿರುವ ಹಾಗೆ ಜನರಿಗೆ ದನಕರುಗಳ ನಷ್ಟ, ಫಸಲುನಷ್ಟ ಮತ್ತು ಅನೇಕ ಕಡೆ ಮನೆಗಳು ಕುಸಿದು ಬಿದ್ದುಹೋಗಿ ಅದರಿಂದಲೂ ಜನರಿಗೆ ನಷ್ಟವಾಗಿದೆ. ವಾಸದ ಮನೆಗಳು ಸಹ ಬಿದ್ದುಹೋಗಿರುವಾಗ ಅವರು ಎಲ್ಲಿ ನಿಂತುಕೊಳ್ಳಬೇಕು? ಈ ವಿಚಾರದಲ್ಲಿ ನಾನು ಇನ್ನು ಹೆಚ್ಚಿಗೆ ಹೇಳದೆ ಅವರು ಈ ದಿವಸ ಬೀದಿ ಭಿಕಾರಿಗಳಾಗಿದ್ದಾರೆಂದು ಹೇಳಿದರೆ ಸಾಕಾಗಿದೆ. ಏನೋ ಪುರಾತನ ಕಾಲದಲ್ಲಿ ಕಟ್ಟಿಸಿದ್ದ ಕೆಲವು ದೇವಸ್ಥಾನಗಳು ಅಲ್ಲಿ ಇದ್ದುದರಿಂದ, ಜನರು ಅಲ್ಲಿ ನಿಲ್ಲುವುದಕ್ಕಾದರೂ ಒಂದು ಅವಕಾಶ ಸಿಕ್ಕಿದ್ದಕ್ಕಾಗಿ ಸಂತೋಷಪಡಬೇಕಾಗಿದೆ. ಇಷ್ಟೇ ಅಲ್ಲದೆ ಅಲ್ಲಿಯ ಸ್ಥಳೀಯಸಂಸ್ಥೆಗಳು ಇವರಿಗೆ ಬಹಳ ಸಹಾಯ ಮಾಡಿರತಕ್ಕ ವಿಚಾರವಾಗಿ ನಾವೆಲ್ಲರೂ ಬಹಳ ಸಂತೋಷಪಡಬೇಕಾಗಿದೆ. ಟಿ.-ನರಸೀಪುರದ ಮುನಿಸಿಪಾಲಿಟಿಯಿಂದಲೂ ಕೂಡ ಸಹಾಯ ನೀಡುತ್ತಾರೆಂಬುದಾಗಿ ಶ್ರೀ ಶ್ರೀನಿವಾಸಯ್ಯಂಗಾರ್ಯರವರಿಂದ ನಾನು ತಿಳಿದು ನನಗೆ ಬಹಳ ಸಂತೋಷವಾಯಿತು. ಆದರೆ ಈಗ ಇರತಕ್ಕದ್ದು ಪ್ರಜಾಸರ್ಕಾರ. ಹಾಗೆ ಹೇಳಿಕೊಂಡು ತಾವು ಸುಮ್ಮನೆ ಕುಳಿತುಕೊಂಡರೆ ಆ ಬೀದಿ ಭಿಕಾರಿಗಳಾಗಿರತಕ್ಕ ಜನರಿಗೆ ಅನುಕೂಲವಾಗುತ್ತದೆಯೇ? ಆದಷ್ಟು ಜಾಗ್ರತೆಯಾಗಿ ತಾವೆಲ್ಲರೂ ಅವರಿಗೆ ಸಹಾಯ ನೀಡಬೇಕೆಂದು ವಿದ್ಯಾರ್ಥಿಗಳು ಮತ್ತು ಸೇವಾ ದಳಗಳು ಹೀಗೆ ಯಾರು ಯಾರನ್ನು ಈ ಸಂದರ್ಭದಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದೆಯೋ ಅಂಥವರ ಸಹಾಯಗಳನ್ನೆಲ್ಲಾ ಉಪಯೋಗಿಸಿಕೊಂಡು ಅವರಿಗೆ ಏನೇನು ಪರಿಹಾರ ನೀಡಬೇಕೋ ಅದನ್ನು ಬೇಗ ಕೈಗೊಳ್ಳುವುದು ಉತ್ತಮ. ಈ ದಿವಸ ರೈತರಿಗೆ ಫಸಲು ಯಾವ ರೂಪದಲ್ಲಿ ಎಷ್ಟು ನಷ್ಟವಾಗಿದೆಯೆಂಬ ಅಂಶವನ್ನು ತಾವು ಕೇಳಬಹುದು. ನೆಲಗಡಲೆಯ ಫಸಲು ಕಮರ್ಷಿಯಲ್ ಬೆಳೆಯೆಂಬುದನ್ನು ನಾನು ಹೇಳಬೇಕಾದದ್ದು ಅನಗತ್ಯ. ಅವರು ಯಾವ ಉದ್ದೇಶದಿಂದ ಈ ಬೆಳೆಯನ್ನಿಟ್ಟಿದ್ದರು? ಸರ್ಕಾರದಿಂದ ಮತ್ತು ಸಾಹುಕಾರರಿಂದ ತೆಗೆದುಕೊಂಡಿದ್ದ ಸಾಲದ ಹಣ ಮತ್ತು ಅದರ ಬಡ್ಡಿ ಇತ್ಯಾದಿಗಳನ್ನು ತೀರಿಸುವುದು ಈ ಫಸಲಿನ ಆಧಾರದಮೇಲೆ ನಿಂತಿತ್ತು. ಈ ದಿವಸ ಅಂಥ ಆಧಾರವಾಗಿದ್ದ ಬೆಳೆಯು ರೈತನ ಕೈಸೇರದಂತಾಗಿ ಅವರು ಸಾಲಸೋಲಗಳನ್ನು ತೀರಿಸಲು ಮಾರ್ಗವಿಲ್ಲದೆ ಕಣ್ಣುಗಳನ್ನು ಬಿಡುತ್ತಿದ್ದಾರೆ. ಇದಕ್ಕೆ ನಿವಾರಣೋಪಾಯಗಳೇನು? ಅವರು ಫಸಲಿನಮೇಲೆ ತೀರಿಸುವುದಾಗಿ ಏನಾದರೂ short-term loanಗಳನ್ನು ಪಡೆದುಕೊಂಡಿದ್ದರೆ, ಅಥವಾ ತಕಾವಿ ಇತ್ಯಾದಿ ಸಾಲಗಳನ್ನೇನಾದರೂ ಪಡೆದುಕೊಂಡಿದ್ದರೆ, ಅಂಥ ಸಾಲಗಳ ವಸೂಲಿಯ ಬಗ್ಗೆ ಈ ವರ್ಷ ಅವುಗಳ ವಸೂಲಿ ಮಾಡತಕ್ಕದ್ದನ್ನು ಅಲ್ಲಿ ನಿಲ್ಲಿಸುವುದಲ್ಲದೆ, ಅವರಿಗೆ ಮತ್ತಷ್ಟು ತಕಾವಿ ಇತ್ಯಾದಿ ಸಾಲಗಳನ್ನು ಕೊಟ್ಟು ಅವರಿಗೆ ಸಹಾಯ ನೀಡಬೇಕು.

ತಾವು ಹೀಗೆ ಸಹಾಯಗಳನ್ನು ಮಾಡಿದರೆ ಆ ಜನರು ಮುಂದೆ ತಮ್ಮ ಕಸಬಿನಮೇಲೆ ನಿಲ್ಲುವುದಕ್ಕೆ ಸಹಾಯವಾಗುತ್ತದೆ. ರೈತಾಪಿ ಕಸಬಿಗೆ ಮುಖ್ಯವಾಗಿ

ಬೇಕಾಗಿದ್ದ ದನಕರುಗಳೂ ಮತ್ತು ವ್ಯವಸಾಯದ ಉಪಕರಣಗಳೂ ಎಲ್ಲವೂ ನೀರಿನಲ್ಲಿ ಕೊಚ್ಚಿ ಹೋಗಿವೆ. ಅವುಗಳನ್ನು ಪುನಃ ಅವರು ಪಡೆಯಬೇಕಾಗಿದ್ದರೆ ಅವರಲ್ಲಿ ಹಣವಿರಬೇಕು. ಹಣವಿದ್ದರೆ ಅವುಗಳನ್ನು ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತಿತ್ತು. ಆದರೆ ರೈತನಲ್ಲಿದ್ದುದೆಲ್ಲಾ ಕೊಚ್ಚಿಕೊಂಡು ಹೋಗಿದೆ. ಆದಕಾರಣ ಸರ್ಕಾರದವರು ಆದಷ್ಟು ಬೇಗ ಸಹಾಯ ನೀಡಿದರೆ ಅವರ ಕಸಬನ್ನು ಮುಂದುವರಿಸಿ ಕೊಂಡು ಹೋಗಲು ಸಾಧ್ಯವಾದೀತು.

ಇನ್ನು ಮನೆಗಳು ಕೊಚ್ಚಿಕೊಂಡು ಹೋಗಿರುವುದರಲ್ಲಿ ಅಧಿಕ ಸಂಖ್ಯಾತ ಜನರೆಲ್ಲರೂ ಬಡಬಗ್ಗರೂ ಮತ್ತು ಕೂಲಿಗಾರರೂ ಆಗಿದ್ದಾರೆ. ಈ ಬಡಬಗ್ಗರಿಗೆ ಜೀವನೋಪಾಯ ನಡೆಸಲು ಸಹಾಯಕವಾಗುವಂತೆ ಸರ್ಕಾರದವರು ಯಾವುದಾದರೂ ಸರ್ಕಾರಿ ಕಟ್ಟಡಗಳ ಮತ್ತು ರಸ್ತೆ ನಿರ್ಮಾಣಕಾರ್ಯ ಮತ್ತು ಯಾವುದಾದರೂ ಅಣೆಕಟ್ಟು ಇತ್ಯಾದಿಗಳ ಕೆಲಸ ನಡೆಯಬೇಕಾಗಿದ್ದರೆ, ಅವುಗಳನ್ನು ಬೇಗ ಮಂಜೂರು ಮಾಡಿಸಿ, ಅವರಿಗೆ ಕೆಲಸ ದೊರಕುವಂತೆಯಾದರೂ ಮೊದಲು ಮಾಡಿ ಅವರಿಗೊಂದು ಉಪಕಾರವನ್ನು ತಾವು ನೀಡಬೇಕಾಗಿದೆ.

ಇನ್ನು ನದಿಗಳ ಅಕ್ಕಪಕ್ಕ ಪ್ರದೇಶದ ಗದ್ದೆಗಳ ರೈತರು ಭತ್ತದ ಫಸಲನ್ನಿಡಲು ಬೆಳೆಸಿದ್ದ ಭತ್ತದ ಪೈರೆಲ್ಲಾ, ಪ್ರವಾಹ ಹೆಚ್ಚಾಗಿಹರಿದು ರೈತರ ದೃಷ್ಟಿಯಲ್ಲಿ ಆ ಭತ್ತದ ಪೈರು ಬೆಳೆಯಿಡಲು ಚೆನ್ನಾಗಿರುವುದಿಲ್ಲವೆಂದು ಭಾವಿಸಿದ್ದರೂ ವ್ಯವಸಾಯದ ಇಲಾಖೆಯವರು ಅದನ್ನೇ ಬೆಳೆ ಇಡಿ ಎಂದು ಹೇಳುತ್ತಿದ್ದಾರೆ. ಆದರೆ ಅದನ್ನು ರೈತರು ಒಪ್ಪುತ್ತಿಲ್ಲ. ಆದಕಾರಣ ಸರ್ಕಾರದವರು ಅವರಿಗೆಲ್ಲಾ ಬೀಜದಭತ್ತವನ್ನು ಸಾಲವಾಗಿ ಇಲ್ಲವೇ ಮುಫ್ಪತ್ತಾಗಿ ಯಾದರೂ ಕೊಟ್ಟು ಅವರಿಗೆ ಉಪಕಾರವಾಡಬೇಕು. ಈ ಕಾರ್ಯವನ್ನು ತಾವಿನ್ನು 10-15 ದಿನಗಳಲ್ಲೇ ಮಾಡಿದರೆ ಬಹಳ ಉತ್ತಮ. ರೈತರು ಮಳೆಯನ್ನೇ ನಿರೀಕ್ಷಿಸಿಕೊಂಡು ಕುಳಿತಿರಲು ಸಾಧ್ಯವಿಲ್ಲ. ಅವರು ಸ್ವಾಭಾವಿಕ ಪರಿಸ್ಥಿತಿಗೆ ಹೊಂದಿಕೊಳ್ಳಬೇಕು. ಈ ದಿವಸ ರೈತರ ಸ್ಥಿತಿ ಇಂಥ ಕಷ್ಟಕ್ಕೀಡಾಗಿರುವಾಗ ತಾವು ಅವರಿಗೆ ಬಿತ್ತನೆ ಭತ್ತವನ್ನು ಜಾಗ್ರತೆ ಒದಗಿಸಿ ಎಂದು ಸಲಹೆ ಮಾಡುತ್ತೇನೆ.

ಮನೆಗಳನ್ನು ಕಟ್ಟಿಕೊಳ್ಳತಕ್ಕ ಬಗ್ಗೆ ತಕ್ಷಣ ಸಹಾಯ ನೀಡಬೇಕು. 1924 ರಲ್ಲಿ ಕೂಡ ಒಂದಾವರ್ತಿ ಹೀಗೆಯೇ ಪ್ರವಾಹ ಬಂದು ಜನರಿಗೆ ತುಂಬ ಕಷ್ಟ ನಷ್ಟಗಳುಂಟಾದುವೆಂದು ಕೇಳಿದ್ದೇನೆ. ಆದರೆ ಆಗಿದ್ದ ಸರ್ಕಾರದವರು ಯಾವರೀತಿ ಪರಿಹಾರನೀಡಿದರೆಂಬುದು ನನಗೆ ಗೊತ್ತಿಲ್ಲ. ಇನ್ನು ಹತ್ತಾರು ವರ್ಷಗಳ ಮೇಲೆ ಪುನಃ ಇದೇ ರೀತಿ ಆದರೂ ಆಗಬಹುದು. ಇಂಥ ತೊಂದರೆಗಳು ಪುನಃ ಆಗದಿರುವಂತೆ ಮಾಡಲು ಅಲ್ಲಿಯ ಜನರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಬೇರೆ ಸ್ಥಳವನ್ನು ಚುನಾವಣೆ ಮಾಡಬೇಕಾಗಿದೆ. ಎಷ್ಟು ದಿವಸ ಗುಡಿಸಲುಗಳನ್ನು ಕಟ್ಟಿಕೊಂಡಿರಲು ಸಾಧ್ಯ? ನಾವು ಆ ಸ್ಥಿತಿಯಲ್ಲಿದಿದ್ದರೆ ನಮಗೂ ಆ ಕಷ್ಟಗಳು ಗೊತ್ತಾಗುತ್ತಿದ್ದುವು. ಆದುದರಿಂದ ಸರ್ಕಾರದವರು ಈ ದಿವಸ ಅವರಿಗೆ ಇರುವುದಕ್ಕೆ ನೆರಳು ಮತ್ತು ಊಟಕ್ಕೆ ಅನ್ನ ಕೊಡಬೇಕಾಗಿದೆ. ದವಸಧಾನ್ಯಗಳನ್ನು ಕೊಳ್ಳಲು ಸಾಹುಕಾರರು ಅವರಿಗೆ ಸಾಲದ ರೂಪದಲ್ಲಿ ದುಡ್ಡನ್ನು ಕೊಡುವುದಿಲ್ಲ. ಏನಿದ್ದರೂ ಅವರಿಗೆ ಸರ್ಕಾರದವರಿಂದಲೇ ಸಹಾಯ ದೊರೆಯಬೇಕು.

ಅನೇಕ ಕಡೆ ಹುಲ್ಲಿನ ಮೆದೆಗಳೂ ಸಹ ಕೊಚ್ಚಿ ಹೋಗಿವೆ. ದನಗಳ ಮೇವಿಗೂ ಸಹ ಬಹಳ ಅಭಾವ ಬಂದಿದೆ. ಅವು ಮೂಕಪ್ರಾಣಿಗಳು. ಹುಲ್ಲಿದ್ದರೆ ಅವುಗಳನ್ನು ಸಾಕಬಹುದು, ಆದ್ದರಿಂದ ಸರ್ಕಾರದವರು ಹುಲ್ಲಿನ ಸಹಾಯ ಸಹ ನೀಡಬೇಕು. ಸರ್ಕಾರದವರು ಅವರಿಗೆ ಮುಖ್ಯವಾಗಿ ಯಾವ ಯಾವ ಸಹಾಯ ಮಾಡಬಹುದೆಂದು ಭಾವಿಸುತ್ತಾರೋ ಆ ಬಾಬಿನಲ್ಲಿ ಅವರು ಸಹಾಯ ನೀಡಬೇಕೆಂದು ಮಾತ್ರ ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ಸ್ವಾಮಿ, ಈಗ ಸಭೆಯ ಮುಂದೆ ಮಂಡಿಸಿರತಕ್ಕ ನಿಲುವಳಿ ಸೂಚನೆಯ ಬಗ್ಗೆ ನಾನು ಒಂದೆರಡು ವಿಷಯಗಳನ್ನು ಮಾತ್ರ ತಿಳಿಸಬೇಕೆಂದಿದ್ದೇನೆ. ಹೆಚ್ಚಿನ ಪ್ರವಾಹ ಬಂದು ಆ ರೀತಿಯಾಗಿ ಅಲ್ಲಿ ನಷ್ಟ ಉಂಟಾಗಿರುವುದು ಬಹಳ ಶೋಚನೀಯ. ಅಲ್ಲಿ ನೊಂದು ಕಷ್ಟಕ್ಕೀಡಾಗಿರತಕ್ಕವರ ವಿಚಾರದಲ್ಲಿ ನಮಗೆಲ್ಲರಿಗೂ ಬಹಳ ಸಹಾನುಭೂತಿಯಿದೆ. ಆದರೆ ಅಂಥ ಅಪಾಯಗಳಿಗೀಡಾಗದಂತೆ ಅದನ್ನು ತಪ್ಪಿಸಬಹುದಾಗಿತ್ತು. ಆ ಜನರಿಗೆ ಸರಿಯಾದ ಮುನ್ನೆಚ್ಚರಿಕೆ ಕೊಡಲಿಲ್ಲವೆಂಬ ಬಗ್ಗೆ ನನಗೆ ತುಂಬ ಕೋಪವಿದೆ.

ಅಧ್ಯಕ್ಷರು.— ಏನು, ಮಳೆ ಮುನ್ನೆಚ್ಚರಿಕೆ ಕೊಡಲಿಲ್ಲ ವೆಂತಲೇ!

ಶ್ರೀ ಮುಲ್ಕ ಗೋವಿಂದರೆಡ್ಡಿ.—ಹಾಗಲ್ಲ. ನನ್ನ ಅಭಿಪ್ರಾಯದಲ್ಲಿ ಸರ್ಕಾರದವರು ಈ ಬಗ್ಗೆ ಅಲ್ಲಿರತಕ್ಕ ಜನರಿಗೆ ಸರಿಯಾದ ಮುನ್ನೆಚರಿಕೆಯನ್ನು ಕೊಡಲಿಲ್ಲವೆಂದೂ, ಹಾಗೆ ಅವರಿಗೆ ಮುನ್ನೆಚ್ಚರಿಕೆ ಕೊಟ್ಟಿದ್ದರೆ ಇಂಥ ಭಾರಿ ಕಷ್ಟನಷ್ಟಗಳುಂಟಾಗದಂತೆ ಅದನ್ನು ತಡೆಗಟ್ಟಲು ಸಾಧ್ಯವಿತ್ತೆಂದೂ ಹೇಳುತ್ತೇನೆ. ಹೆಚ್ಚಿನ ಪ್ರವಾಹ ಬರುತ್ತದೆಂಬ ಅಂಶ ಅಲ್ಲಿದ್ದವರಿಗೆ ಎಂದರೆ ಅಧಿಕಾರವರ್ಗದವರಿಗೆ ಚೆನ್ನಾಗಿ ಗೊತ್ತಿತ್ತು. ಆದರೆ ಹಾಗೆ ಗೊತ್ತಿದ್ದರೂ ಸರ್ಕಾರದವರು ಸರಿಯಾದ ಎಚ್ಚರಿಕೆ ತೆಗೆದುಕೊಂಡು ಕೆಲಸಮಾಡಿಲ್ಲವೆಂದು ಹೇಳಬೇಕಾಗಿದೆ. ಹಿಂದೆ ಚೈನಾ ಮತ್ತು ಜಪಾನ್ ದೇಶಗಳಲ್ಲಿ ಇದೇ ರೀತಿಯಾಗಿ ಪ್ರವಾಹದ ಹಾವಳಿಯಿಂದ ಲಕ್ಷಾಂತರ ಜನರು ಸಾಯುತ್ತಿದ್ದರು ; ಲಕ್ಷಾಂತರ ರೂಪಾಯಿಗಳ ಬೆಲೆ ಬಾಳತಕ್ಕ ಸಾಮಾನುಗಳೆಲ್ಲಾ ನಷ್ಟವಾಗಿ ಹೋಗುತ್ತಿದ್ದವು. ಆದರೆ ಈ ದಿವಸ ಅಂಥ ಪ್ರಾಣಪಾಯಗಳಾಗಲಿ ಅಥವಾ ಸಾಮಾನುಗಳ ನಷ್ಟವಾಗಲಿ ಆಗಲು ಅವಕಾಶವಿಲ್ಲ. ನಮ್ಮ ದೇಶದಲ್ಲಿ ಕಾವೇರಿಯು ಒಂದು ಬಹಳ ದೊಡ್ಡ ನದಿ. ಇಂಥ ದೊಡ್ಡ ನದಿಗಳಿಗೆ ಅಣೆಕಟ್ಟುಗಳನ್ನು ಹಾಕುವುದು ಸಾಮಾನ್ಯವಾಗಿ ಎರಡು ಕಾರಣಗಳಿಗಾಗಿ. ಆ ಪೈಕಿ ಒಂದನೆಯ ಕಾರಣ, ಹೀಗೆ ದೊಡ್ಡ ಅಣೆಕಟ್ಟುಗಳನ್ನು ಹಾಕಿ, ಅಲ್ಲಿ ನೀರನ್ನು ತಡೆದು ವ್ಯವಸಾಯಕ್ಕೆ ಅನುಕೂಲಗಳನ್ನೊದಗಿಸುವುದೇ ಆಗಿದೆ. ಇನ್ನು ಎರಡನೆಯ ಕಾರಣವೇನೆಂದರೆ, ಅಂಥ ದೊಡ್ಡ ಪ್ರವಾಹಗಳು ಹರಿಯುತ್ತಿರುವ ಕಡೆ ರೈತರಿಗೂ ಮತ್ತು ಜನಗಳಿಗೂ ಕಷ್ಟನಷ್ಟಗಳೂ ಮತ್ತು ಬೆಲೆಬಾಳತಕ್ಕ ಸಾಮಾನಗಳ ಲುಕ್ಸಾನೂ ಆಗದಿರುವಂತೆ ಮಾಡಲು ಹೀಗೆ ಅಣೆಕಟ್ಟುಗಳನ್ನು ಹಾಕುತ್ತಾರೆ. ಹೀಗಿರುವಾಗ ಆ ಕಾವೇರಿ ನದಿಗೆ ಒಂದು ದೊಡ್ಡ ಅಣೆಕಟ್ಟನ್ನು ಹಾಕಿದ್ದರೂ, ಏತಕ್ಕೆ ಪ್ರವಾಹ ಆ ರೀತಿ ಹೆಚ್ಚಿಗೆ ಬಂದಿತು? ಹಾಗೆ ಬರುವ ಸಂದರ್ಭವಿದ್ದರೂ, ಅಲ್ಲಿ ಸರಿಯಾದ ಕಾವಲಿದ್ದಿದ್ದರೆ, ಅವರೇಕೆ ಸಕಾಲದಲ್ಲಿ ಎಚ್ಚರಿಕೆಕೊಡಲಿಲ್ಲ? ಕೊಡಗಿನಲ್ಲಿರತಕ್ಕ ಹವಾಮಾನ (Weather) ಹೇಗಿತ್ತೆಂಬ

(ಶ್ರೀ ಮುಲ್ಕ ಗೋವಿಂದರೆಡ್ಡಿ.)

ಅಂಶ 6 ಘಂಟೆಗಳಿಗೆ ಮುಂಚಿತವಾಗಿಯೇ ಸಂಬಂಧಪಟ್ಟ ಅಧಿಕಾರಿಗಳಿಗೆ ಬಂದಿತ್ತು. ಕಾವೇರಿಯಲ್ಲಿ ನೀರು ವಿಶೇಷವಾಗಿ ಬರುತ್ತಿತ್ತೆಂಬ ಸಂತೋಷವೇನೋ ಇತ್ತು, ಕನ್ನಂಬಾಡಿ ಕೆರೆಗೆ ನೀರು ಬರುತ್ತಿದ್ದುದು ಒಂದು ಸಂತೋಷವೇ ಹೌದು. ಆದರೆ ಅಲ್ಲಿದ್ದ ಅಧಿಕಾರಿಗಳು ಸರಿಯಾದ ವಿವೇಚನೆಯನ್ನಿಟ್ಟುಕೊಂಡು ಎಷ್ಟು ನೀರು ಬರುತ್ತಿದೆ, ಎಷ್ಟು ನೀರನ್ನು ಹೊರಗೆ ಬಿಡಬೇಕೆಂಬುದನ್ನು ನೋಡದೆ, ಕೆರೆಯಲ್ಲಿ 100–110 ಅಡಿ ನೀರು ಇದ್ದಾಗಲೂ ಬರುತ್ತಿದ್ದ ನೀರು 1 ಲಕ್ಷ 25 ಸಾವಿರ ಕ್ಯೂಸೆಕ್ಸ್ ಇದ್ದಾಗಲೂ ಅದನ್ನೆಲ್ಲಾ ತಡೆದು, ಕಟ್ಟ ಕಡೆಯಲ್ಲಿ ಇನ್ನೂ ಪ್ರವಾಹ ಹೆಚ್ಚಾದ ನಂತರ ಏಕ್‌ದಂ ಅವರು 1 ಲಕ್ಷ 25 ಸಾವಿರ ಕ್ಯೂಸೆಕ್ಸ್ ನೀರಿಗೆ ಜಾಸ್ತಿಯಾಗಿ ಬಿಡದೆ ಇದ್ದಿದ್ದರೆ, ಆ ನೀರಿನ ಪ್ರವಾಹ ವೆಲ್ಲೆಸ್ಲಿ ಬ್ರಿಡ್ಜಿನಮೇಲೆ ಹರಿದುಹೋಗಲು ಅವಕಾಶವಿರುತ್ತಿರಲಿಲ್ಲ; ಆಗ ಇಂಥ ಯಾವ ನಷ್ಟಗಳೂ ಆಗುತ್ತಿರಲಿಲ್ಲ. ಹಾಗೆ ಮಾಡದೆ ಕೆರೆಯಲ್ಲಿ ನೀರಿನ ಮಟ್ಟ 123 ಅಡಿಗೆ ಏರಿದಂಥ ಕಾಲದಲ್ಲಿ ಆ ನೀರನ್ನೆಲ್ಲಾ ಒಂದಾವರ್ತಿಗೇ ಆಚೆಗೆ ಬಿಟ್ಟದ್ದು ಈ ಘೋರ ಅಪಾಯಕ್ಕೆ ಕಾರಣವಾಯಿತು. ಆ ಅಧಿಕಾರಿಗಳ ಮೇಲೆ ನನ್ನ ಇನ್ನೂ ಒಂದು ಛಾರ್ಜು ಏನಿದೆಯೆಂದರೆ :—ಆ ಕನ್ನಂಬಾಡಿ ಕಟ್ಟೆಗೆ ಸಂಬಂಧಪಟ್ಟ ಅಧಿಕಾರಿಗಳು ಹವಾಮಾನದ ವರದಿಯನ್ನು ತರಿಸಿಕೊಂಡಿದ್ದಾಗ್ಯೂ, ಮುಂದಕ್ಕೆ ಇನ್ನೂ ಎಷ್ಟು ಮಳೆಬರಬಹುದು, ನೀರೆಷ್ಟು ಬರಬಹುದು ಎಂಬ ಬಗ್ಗೆ ಅವರು ಮುಂಜಾಗ್ರತೆಕಾರ್ಯಕ್ರಮಗಳನ್ನು ಕೈಗೊಂಡು ಎಲ್ಲಾ ಫ್ಲಡ್ಸ್ ಗೇಟುಗಳನ್ನೂ ತೆಗೆದು ನೀರನ್ನು ಆಚೆ ಬಿಟ್ಟಿದ್ದರೆ ಈ ಅನಾಹುತವೇ ಆಗುತ್ತಿರಲಿಲ್ಲ. ಹಾಗೆ ಮಾಡದೆ ಇದ್ದುದರಿಂದ ಅಲ್ಲಿದ್ದವರ ಇನ್‌ಎಫಿಷಿಯೆನ್ಸಿ ಮತ್ತು ಇನ್‌ಕೇಪಬಲಿಟಿಯೇ ಇಷ್ಟಕ್ಕೆಲ್ಲ ಕಾರಣವಾಗಿದೆಯೆಂದೂ, ಅವರು ಇಂಥ ದೊಡ್ಡ ತಪ್ಪನ್ನು ಮಾಡಿದ್ದಾರೆಂದೂ ಹೇಳಬೇಕಾಗಿದೆ. ಹೀಗೆ ನಾವು ಈ ವಿಚಾರವನ್ನು ಒಂದು ಅಡ್ಜರ್ನ್‌ಮೆಂಟ್ ಮೋಷನ್ನಾಗಿ ತಂದು ಇಲ್ಲಿ ಚರ್ಚೆ ಮಾಡಿದರೆ ಅದರಿಂದಲೇ ಎಲ್ಲಾ ಪ್ರಯೋಜನವಾದಂತೆ ಆಗಲಿಲ್ಲ. ಇದಕ್ಕಾಗಿ ಒಂದು ಸಮಿತಿ ಮಾಡಿ, ಈ ಬಗ್ಗೆ ಯಾರು ಯಾರು ತಪ್ಪಿತಸ್ಥರಿದ್ದಾರೆಂಬುದನ್ನು ಕಂಡುಹಿಡಿದು, ಅವರಿಗೆ ತಕ್ಕ ಶಿಕ್ಷೆ ಮಾಡುವುದಲ್ಲದೆ ಮುಂದಕ್ಕೆ ಇಂಥ ದೊಡ್ಡ ಪ್ರವಾಹ ಬಂದಾಗ ಅದರಿಂದ ಅಪಾಯಗಳಾಗದಿರುವಂತೆ ಮಾಡಲು ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ ಈ ಎರಡು ಕಾರಣಗಳಿಗಾಗಿ ಒಂದು ತಜ್ಞರ ಸಮಿತಿಯನ್ನು ಸರ್ಕಾರದವರು ನೇಮಿಸಬೇಕೆಂದು ಹೇಳಿ ಈಗ ತಪ್ಪುಮಾಡಿರತಕ್ಕವರ ಬಗ್ಗೆ ಸರಿಯಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳಿ ನಾನು ಇದನ್ನು ಅನುಮೋದಿಸುತ್ತೇನೆ.

Mr. SPEAKER.—So, punishment is more important than seeking relief. (Laughter.)

Sri MULKA GOVINDA REDDY.—So that such things won't occur again We always believe in the award of deterrent punishment. You know in course of time deterrent punishment would have some effect on the people.

Sri J. MOHAMED IMAM.—You did not divert some rain to Chitaldrug ?

Sri S. SRINIVASA IYENGAR (T.-Narsipur).—Mr. Speaker, I beg to place before this House a graphic description of what damages the floods have caused to the property in T.-Narsipur Taluk. I represent T.-Narsipur Taluk wherein we have two rivers; one is Kapila and the other is Cauvery. The people of T.-Narsipur Taluk are subjected to the floods of these two rivers flowing together. I was present all along from the 6th to the 9th and even much earlier. The floods in these two rivers began to flow from the 6th and by the 7th the communications from T.-Narsipur town to every other part of the Taluk and to Chamarajngar, Kollegal, Mysore and Sivasamudram were cut off; all the roads were flooded. We could not go anywhere and the telegraphic communication was completely cut off and the telephone wires were submerged. In spite of the fact that we have two bridges, one for Cauvery and the other for Kapini, we could not use these two bridges because between these two bridges we have a dip and the floods of these two rivers entered into the ditch and made these bridges unusable. The telephone wires were submerged in the floods of the Cauveri and Kapini so much so that we could not communicate with the outside world on the 7th and 8th. You can very well picture what type of relief we could have extended to people living on the other banks of the rivers. We were ourselves surrounded with water and we had no communication with the outside world. You can very well imagine what would be the condition of the people living on the banks of the rivers Cauvery and Kapini. They were absolutely helpless. We could not rush any foodstuffs or anything to those people because we had no boats, no bridges, so much so that we were empty-handed. But with all that, with the greatest possible risk, no doubt the officials and other

interested parties and myself, the Revenue Sub-Divisional Officer and others were there ; we took hold of the boats that were available and with great risk we put them into use and extended what little relief we could do to the helpless people in T.-Narsipur. The people were living actually on the terrace of the temple. Just because the administration had not the necessary boats or anything at their command, they could not go and see what happened to the people living in the villages all along the banks of Cauvery and Kapini. We only got the information after the floods subsided, that is, three days later. I believe the people themselves acted and helped themselves ; they had the commonsense and calmness to act. That is because T.-Narsipur suffered such floods in the year 1911, in the year 1924, in the year 1950 and once again now in 1953. The point is, have we learnt any lesson from these floods, what is it we could have done ; having known what damages these floods would cause, what is the reaction on the part of the Government ? The funniest part of it is, knowing full well that public institutions like the Taluk Office and the Sub-Registry Office situated in T.-Narsipur town would receive water and there would be flood water upto a depth of 4 to 5 feet inside those buildings, extensions are being made to the existing office buildings very recently and at a cost of nearly twenty to thirty thousand rupees. Why I had to introduce that item now, being conscious of the objections raised by my friend, is, the Government could have saved that money and rebuilt the whole lot in a higher region so that there would have been a permanent arrangement instead of a hotch-potch arrangement. We could permanently shift all these villages that would be affected by floods to higher regions. We have been subjected to these hardships all along and we have borne it calmly and suffered the damage it has caused now.

After the floods subsided, on an examination of the whole issue, I classify the damage into three categories. (i) The damage the floods caused to the wet land on the banks of the rivers ; (ii) the damage that the floods caused to the standing crops of jola on the dry lands ; and (iii) the damage the floods caused to the residential buildings in the low lyng areas and other areas. My own estimate is this. All these three categories put together have resulted in a total loss of Rs. 2 lakhs in T.-Narsipur Taluk alone. My analysis is as follows : In the wet lands on the banks of these rivers, the seed plots have received either a deposit of sand by the floods of river Cauvery or will have been washed away on account of the velocity of the running water. Such damage has been caused in about 2,000 acres on the banks of rivers Cauvery and Kapini. More than that, most of the wet lands situated in the borders have been rendered uneven because those level surface have been pitted by the overflow of water and its velocity ; it has scoured a certain area ; it has rendered the land unfit for wet cultivation immediately. That loss is very serious and such loss has happened to about 2,000 acres in the entire taluk.

The second issue is, the damage the floods have caused to the standing dry crops of jola. There are certain areas in T.-Narsipur taluk wherein jola is grown in low-lying areas like the tank-Atchkats and other parts. Because of the floods water has flowed into those lands and can never be drained so much so that the standing crops get automatically destroyed and in about 200 acres of dry land the standing crop of jola will be a total loss to us. It is a national loss.

(iii) About the buildings. Several houses in the village of Kendanakoppalu on the other bank of Cauveri, T.-Narsipur town, Mole, Acharaiyanahundi, Kukkur, Sosale, Talkad, Holasalu and Malangi have collapsed. In those parts which I visited,

(Sri S. SRINIVASA IYENGAR.)

the mud houses have collapsed. Roofing materials in certain houses are intact, but certain other houses have been washed away and rebuilding becomes a problem. Most of the owners of these houses are absolutely poor and they can ill-afford to rebuild their houses at their own cost. Now the question comes in, whether it would be advisable to allow them to rebuild in the same place where the buildings existed. Suppose it is done; it is quite probable that the place may be subjected to floods once again. I had already a forecast that there would be floods again in the third week of this month. We did take early precaution to evacuate all these people in the flood-stricken areas and they have evacuated to several places and so much so, there has been no loss of life. The Chief Minister, the Home Minister, the Education Minister and the Local Self-Government Minister were pleased to come to T.-Narsipur and I had taken them round the whole area. They had a fine picturesque view of the beautiful river about two miles in length and they saw the damages caused and they were pleased to offer immediate relief then and there. They addressed a gathering of so many hundreds of people. They saw personally the hardships that these people had suffered. As regards the buildings I was just discussing, it would not be advisable to rebuild the houses in the place where they stand. In that case, the shifting of these buildings is absolutely essential and it means money. It should be done at any cost. So far as T.-Narsipur town is concerned, the Chief Minister was pleased to give a grant of Rs. 10,000 to the Municipal Council and the Municipal Council will add another Rs. 5,000 or Rs. 10,000 to that fund and they will rebuild a new colony and give houses to those people affected by floods either free of cost or at a reasonable price and take into their possession the existing buildings. That area will be levelled up and we will watch floods in future years as mere spectators. In villages the shifting is absolutely essential. The immediate relief the Government will have to extend to give such relief to those people to resettle in the higher region, would be in the order of Rs. 2 lakhs; it would be insufficient to shift them higher up, to build houses and make them live in there. The assistance must be quick because at the present moment they are living under the trees; either in the patronage of well-to-do people . . . (Sri K. Puttaswamy: like the Hon'ble Member) I am not well-to-do. God has given me enough to eat. So the relief must be very quick and the relief should not be in the nature of cash grants; it should be in the nature of permanent relief of acquiring lands straightaway under sec. 17 for laying out sites and building houses and making them live there. I have bitter experience of cash grants. It is very unfortunate that those that owned sites in the extensions, as a result of 1911 floods, have not built their houses even to-day. So that mistake should not be repeated. The Government should take action to see that they build houses or make arrangements to see that permanent relief is rendered so that they get houses in the higher region.

As regards wet lands, not all seed plots have been washed away. There are some wherein deposits of sand have come in. Supply of seed-paddy must be rushed at once; otherwise our harvest would be late. Once the harvest is late, distress conditions wlll prevail. There will be drain in the Government stock and the people will be without food in T.-Narsipur Taluk for a little longer time. Even in respect of wet holdings, there are people who hold half an acre; there are people who have less than three acres, less than five acres and so on. All these people are not in a position to invest on seed paddy and buy it Even if you supply within 24 hours, it would be another 24 days before

they would be in a position to level up the land; that means, the entire harvest would be delayed by one or two months. T.-Narsipur which is called the granary of paddy in Mysore District, will be harvesting paddy in the month of March, not earlier than that, because all these things have to be attended to. The land that is rendered uneven should be brought up to level. The people are not in a position to level it up. The Government should extend immediate relief. The extent to which the damage has been caused must be assessed at once by an impartial judge. Let him go on tour and look at the spot, and cash grants or relief must be extended so far as the levelling up of the land is concerned.

So far as the jola harvest is concerned, those that lost jola must be compensated with jola alone, because they can only sow jola in the coming season; it will be another 12 months before they raise any crop. Their land is rendered unfit because of the continued stay of water to the extent of 5 feet. Even to-day water is entirely covering the crop and it looks like a huge lake and it takes about 15 days to drain the water away.

Therefore, I submit that in the present circumstances, T.-Narsipur Taluk should be extended relief to the tune of nearly Rs. 5 lakhs (*A Voice: Oh!*) for the categories I have suggested and if any Hon'ble Member feels that I have exaggerated things, I offer to take him to the area at my cost and request him to tour round the area and to assess the damage and if he agrees, to double the grant.

4-30 P.M.

ಶ್ರೀ ಎಂ. ಲಿಂಗಣ್ಣ (ನಂಜನಗೂಡು).—ಸ್ವಾಮಿ, ಯಾವ ಪ್ರದೇಶ ಹೊಳೆಯ ಪ್ರವಾಹಕ್ಕೆ ಸಿಕ್ಕಿ ತೊಂದರೆಗೀಡಾಗಿಲ್ಲವೊ ಆ ಪ್ರದೇಶದಿಂದ ಬಂದಿರುವ ಮಿತ್ರರಿಬ್ಬರೂ ಈ ಅವಸರದ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಇದಕ್ಕಾಗಿ ನಾನು ಅವರಿಗೆ ಆಭಾರಿಯಾಗಿದ್ದೇನೆ. ಪ್ರವಾಹದಿಂದ ಉಪಟಳ ಒಮ್ಮೊಮ್ಮೆ ಅನಿರೀಕ್ಷಿತವಾಗಿ ಆಗುವುದು ನಮ್ಮ ಸ್ವಂತ ಅನುಭವಕ್ಕೆ ಬಂದಿದೆ. ಶ್ರೀ ಶ್ರೀನಿವಾಸಯ್ಯಂಗಾರ್ಯರು ಹೇಳಿದ ಹಾಗೆ. 1924 ರಿಂದೀಚೆಗೆ ಮತ್ತೆ ಈ ವರ್ಷ ಇದರ ಅನುಭವವನ್ನು ಪಡೆದಿದ್ದೇವೆ. ಒಂದು ದೃಷ್ಟಿಯಿಂದ ನೋಡಿದರೆ, ಇದರ ಪ್ರಭಾವವನ್ನು ನಿಜವಾಗಿಯೂ ತಡೆಯುವುದು ಅಸಾಧ್ಯವೆಂದು ತೋರುತ್ತದೆ. ಇದು ಪ್ರಕೃತಿಯ ವಿಕೋಪ. ಆದರೂ ಕೂಡ ಇದನ್ನು ಬೇರೆಲ್ಲಿಯೂ ತಡೆದಿಲ್ಲವೆ ಎಂದು ನೋಡುವುದಾದರೆ, ಉದಾಹರಣೆಗೆ ಇಂಥ ಪ್ರವಾಹದ ಅನಾಹುತವನ್ನು ತಡೆಗಟ್ಟಲು ನಮ್ಮ ದೇಶದಲ್ಲಿ ದಾಮೋದರ್ ವ್ಯಾಲಿ ಯೋಜನೆ ಮಾಡಿದ್ದಾರೆ. ನದಿಯಿಂದಾಗುವ ಅನಾಹುತವನ್ನು ತಡೆದು ಆ ನೀರಿನ ಉಪಯೋಗವನ್ನು ಪಡೆಯುವುದೇ ಇದರ ಉದ್ದೇಶ. ಅಮೆರಿಕಾದಲ್ಲಿ ಟೆನೆಸ್ಸಿವ್ಯಾಲಿ ಯೋಜನೆ ಮಾಡಿದ್ದಾರೆ. ಮೊದಲು ಅಲ್ಲಿನ ನದಿಯ ಪ್ರವಾಹ ಏನು ಉಪಟಳವನ್ನು ಮಾಡುತ್ತಿತ್ತೋ ಆ ಪ್ರಕೃತಿಯ ವಿಕೋಪದ ಪ್ರಭಾವವನ್ನು ತಡೆದು ಜನರಿಗೆ ಅದರಿಂದ ಉಪಯೋಗವಾಗುವ ಹಾಗೆ ಅಣೆಯನ್ನು ಕಟ್ಟಿದ್ದಾರೆ. ಇಂಥ ಕೆಲಸವನ್ನು ಮೈಸೂರು ದೇಶದಲ್ಲಿಯೂ ಮಾಡಬಹುದಾದರೂ, 'ಹಣದ ಅಭಾವ ಜಾಸ್ತಿ ಇದೆ, ಇಲ್ಲದಿದ್ದರೆ ನಾನೂ ಕಾವೇರಿ ವ್ಯಾಲಿ ಯೋಜನೆಯನ್ನು ಮಾಡುತ್ತಿದ್ದೆ' ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಬಹುದು. ಈಗ ತುಂಗಭದ್ರಾನದಿಯೂ ಉಕ್ಕಿ ಹರಿಯುತ್ತಿದೆ; 38 ಅಡಿಗಳಷ್ಟು ಪ್ರವಾಹಬಂದಿವೆ. ಇನ್ನೂ ಅಲ್ಲಿ ನೀರು ಜಾಸ್ತಿಯಾಗುತ್ತಿದೆಯೆಂಬ ಸುದ್ದಿಯನ್ನು ಕೇಳಿದರೆ, ತುಂಗಭದ್ರಾನದಿಯಿಂದ, 1924ನೆಯ ಇಸವಿಯಲ್ಲಿ ಕಾವೇರಿ ನದಿಯಿಂದ ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ಆದದ್ದಕ್ಕಿಂತ ಹೆಚ್ಚು ಅನಾಹುತನಾಗಬಹುದೋ ಏನೋ ಎನಿಸುತ್ತದೆ. ಅನಿರೀಕ್ಷಿತವಾಗಿ ದೈವದ ಪ್ರಭಾವದಿಂದ ನಮ್ಮ ದೇಶದಲ್ಲಿ ಮಳೆ ಬಹಳವಾಗಿ ಹೆಚ್ಚುತೊಂದರೆ ಕೊಡುತ್ತಿದೆ. ಈ ತೊಂದರೆಯನ್ನು ನಾವು ಅನುಭವಿಸಬೇಕೇ, ಇದಕ್ಕೆ ಪರಿಹಾರವಿಲ್ಲವೆ ಎಂಬ ವಿಷಯವನ್ನು ಚರ್ಚಿಸಲು ನಾನು ನಿರ್ಣಯವನ್ನು ಕಳುಹಿಸಿದ್ದೆ. ಆದರೆ ತಮ್ಮ ಅಪ್ಪಣೆಯ ಪ್ರಕಾರ ಬೇರೊಂದು ಇದೇ ಸ್ವಬಾವದ ನಿರ್ಣಯಕ್ಕೆ ಅವಕಾಶಕೊಟ್ಟೆ.

ಆರನೆಯ ತಾರೀಖು ಏಳೂವರೆ ಗಂಟೆಯಿಂದ ಏಳನೆಯ ತಾರೀಖು ಕಪಿಲಾ ನದಿ ಪ್ರವಾಹ ಬಂದು ಉಕ್ಕಿ ಕಡಮೆಯಾದವೇಲೆ ಕಾವೇರಿ ಪ್ರವಾಹ ಜಾಸ್ತಿಯಾಯಿತು. ಇದರಿಂದ ನಮಗೆ ಒಂದು ಅನುಕೂಲವಾಯಿತು. ಹಾಗಿಲ್ಲದೆ ಎರಡು ನದಿಗಳ ಪ್ರವಾಹವೂ ಒಟ್ಟಿಗೆ ಬಂದಿದ್ದರೆ ಇನ್ನೂ ಹೆಚ್ಚು ಅನಾಹುತವಾಗುತ್ತಿತ್ತು. ಕಪಿಲಾನದಿ ಪ್ರವಾಹ ಮುಗಿದಮೇಲೆ ಕಾವೇರಿ ಪ್ರವಾಹ ಬಂತು. ಹೀಗೆ ಪ್ರಕೃತಿ ಬಂದು ರೀತಿ ವಕ್ರದೃಷ್ಟಿ ಬೀರಿದರೂ ಒಂದು ವಿಧದಲ್ಲಿ ಅನುಕೂಲಮಾಡಿ ಕೊಟ್ಟಿತು. 'ವೆದರ್ ಫೋರ್‌ಕ್ಯಾಸ್ಟ್'ನ ಪ್ರಕಾರ 27–28 ನೆಯ ತಾರೀಖಿನಲ್ಲಿ ಇನ್ನೂ ಭಾರಿ ಮಳೆಯಾಗಬಹುದೆಂಬ ಸೂಚನೆಯಿದೆ. ಆರು ಏಳನೆಯ ತಾರೀಖಿನ ಪ್ರವಾಹದಿಂದ ನಂಜನಗೂಡು ತಾಲ್ಲೂಕಿನಲ್ಲಿ ಏನು ನಷ್ಟವಾಗಿದೆ ಎಂಬುದನ್ನು ಸಭೆಯ ಮುಂದಿಡಬೇಕೆಂಬ ಆಸೆ ಇದೆ. ಏಳನೆಯ ತಾರೀಖು ಮುಖ್ಯ ಮಂತ್ರಿಗಳು, ಗೃಹ ಮಂತ್ರಿಗಳು, ವಿದ್ಯಾ ಮಂತ್ರಿಗಳು ಮತ್ತು ಸ್ಥಳೀಯ ಸಂಸ್ಥೆಗಳ ಮಂತ್ರಿಗಳ ಜೊತೆಯಲ್ಲಿ ಅಲ್ಲಿಗೆ ಬಂದು ಸ್ಥಳವನ್ನು ಅಜಮಾಯಿಷಿ ಮಾಡಿದರು. ಚಿತ್ರದ ಮುಂದೆ ಸುಮಾರು ನೂರು ಎಕರೆ ಜಮೀನು ನೀರಿನಲ್ಲಿತ್ತು. ಅದು ಚಿತ್ರಕ್ಕೆ ಸಂಬಂಧಪಟ್ಟಿದೆ. ಸುಮಾರು ಸಾವಿರ ಪಲ್ಲದ ಮೇಲೆ ದವಸ ಹಾಳಾಗಿದೆ. ಬತ್ತ, ಬಿತ್ತಿದ್ದದ್ದು ಸುಮಾರು ನೂರು ಇನ್ನೂರು ಪಲ್ಲಾದಷ್ಟು ಹೋಗಿದೆ.

(ಶ್ರೀ ಎಂ. ಲಿಂಗಣ್ಣ)

ಎರಡು ಮೂರು ಅಂಗುಲದ ಮೇಲೆ ಬಿತ್ತನೆ ಪೈರು ಎದ್ದಿದ್ದವು. ಮತ್ತೆ ಅದನ್ನು ಹಾಗೆಯೇ ವ್ಯವಸಾಯ ಮಾಡಲು ಸಾಧ್ಯವಾಗುತ್ತದೆಯೇ ಎಂದರೆ, ಅದೂ ಸಾಧ್ಯವಿಲ್ಲ. ಅದರ ಮೇಲೆ ಪ್ರವಾಹ ಹರಿದು ಮೆಕ್ಕಲು ಮಣ್ಣು ಹರಡಿ ನಷ್ಟವಾಗಿದೆ. ಈ ದೃಷ್ಟಿಯಿಂದ ರೈತ ರಿಗೆ ಸುಮಾರು ಎಂಡು ಸಾವಿರ ರೂಪಾಯಿಗಳವರೆಗೆ ನಷ್ಟವಾಗಿದೆ. ಆ ಪ್ರದೇಶದಲ್ಲಿರತಕ್ಕ ಬೆಳೆ ಹೆಸರು, ಡಕಲೇಕಾಯಿ, ಹಲಸಂದೆ ಮುಂತಾದವು.

ಇದಲ್ಲದೆ, ನಾನು ಇನ್ನೂ ಅನೇಕ ಹಳ್ಳಿಗಳನ್ನು ನೋಡಿದೆ. ಅಲ್ಲೆಲ್ಲಾ ಪ್ರವಾಹದಿಂದ ತೊಂದರೆಯಾಗಿದೆ. ನಂಜನಗೂಡು ತಾಲ್ಲೂಕು ಉಪ್ಪಲಿಗರಹುಂಡಿ ಎಂಬ ಗ್ರಾಮವನ್ನು ಅಲ್ಲಿನ ಜನರೇ ತಮ್ಮ ಪ್ರಯತ್ನದಿಂದ ರಕ್ಷಿಸಿದರು. ಆರು ಏಳನೆಯ ತಾರೀಖಿನ ಮಧ್ಯೆ ರಾತ್ರಿ ಅಲ್ಲಿನ ಜನ ಬಹಳ ಕಷ್ಟಪಟ್ಟು ಸುಮಾರು ಎರಡು ಆಳು ಎತ್ತರ ಕಟ್ಟೆ ಕಟ್ಟಿ ಊರಿಗೆ ನೀರು ನುಗ್ಗದೇ ಇರುವಂತೆ ಮಾಡಿದ್ದಾರೆ. ಹಾಗೆ ಮಾಡದೇಯಿದ್ದರೆ ಆ ಊರು ಜಲಮಯವಾದ ಕಟ್ಟೆಯಾಗುತ್ತಿತ್ತು. ನಮ್ಮ ಕಡೆಯವರು ಬಹಳ ಹಿಂದುಳಿದ ಜನರು. ಅದರೂ ಬಹಳ ಕಷ್ಟಪಟ್ಟು ಕೆಲಸಮಾಡಿದರು. ಆ ಸ್ಥಳದಲ್ಲಿ ಸುಮಾರು ಐದು ಸಾವಿರ ರೂಪಾಯಿಗಳವರೆಗೆ ದವಸ ಧಾನ್ಯ ನಷ್ಟವಾಗಿದೆ. ಕಪಿಲಾನದಿಯ ದಡದಲ್ಲಿರುವ ಮುಳ್ಳೂರುಗ್ರಾಮ, ಹೊರಲವಾಡಿ, ನಗರ್ಲೆ, ತಾಯೂರು ಮುಂತಾದ ಗ್ರಾಮಗಳಲ್ಲಿ ಒಟ್ಟು ಸುಮಾರು 45 ಸಹಸ್ರ ರೂಪಾಯಿಗಳವರೆಗೆ ನಷ್ಟವಾಗಿದೆ. ನಂಜನಗೂಡು ಟೌನಿನಲ್ಲಿ ಆಗಿರುವ ನಷ್ಟವನ್ನು ಮುಖ್ಯಮಂತ್ರಿಗಳೇ ಅಲ್ಲಿಗೆ ಬಂದಾಗ ನೋಡಿದ್ದಾರೆ. ಅಲ್ಲಿ ಸುಮಾರು 20-30 ಮನೆಗಳು ನೆಲಸಮವಾಗಿವೆ. ಈ ಸಮಯದಲ್ಲಿ ಕೆಲವು ಮಿತ್ರರು 'ಅಲ್ಲಿನ ನಷ್ಟವಾಗಿರುವುವು ಹಣವಂತರ ಮನೆಗಳಿರಬಹುದು, ಅಂಥವರಿಗೇಕೆ ಸಹಾಯ, ಪರಿಹಾರ ಕೊಡಬೇಕು, ಎಂದು ಹೇಳಬಹುದು. ನಷ್ಟವೇನೂ ಕಡಿಮೆಯಾಗಿಲ್ಲ, ಮುನಿಸಿಪಾಲಿಟಿಯವರೇ 'ಅಸೆಸ್' ಮಾಡಿರುವ ಪಟ್ಟಿಯು ಪ್ರತಿ ನನ್ನಲ್ಲಿದೆ, ಅದನ್ನು ಬೇಕಾದರೆ ಕೊಡುತ್ತೇನೆ. ಅದರ ಪ್ರಕಾರ ಒಂಭತ್ತು ಸಾವಿರ ರೂಪಾಯಿ ನಷ್ಟವಾಗಿವೆ. ಈ ಒಂಭತ್ತು ಸಾವಿರ ನಷ್ಟದಲ್ಲಿ......

ಅಧ್ಯಕ್ಷರು.—ಒಂಭತ್ತು ಸಾವಿರ ನಷ್ಟಕ್ಕೆ ಹತ್ತು ಸಾವಿರ ಕೊಟ್ಟಿದ್ದಾರೆ!

ಶ್ರೀ ಎಂ. ಲಿಂಗಣ್ಣ.—ಇದು ಬರಿಯ ಮನೆಗಳ ನಷ್ಟದ ಅಂದಾಜು. ಇದರಲ್ಲಿ ಬೆಳೆಗಳ ನಷ್ಟ ಸೇರಿಲ್ಲ. ಅದನ್ನು ಇನ್ನೂ ಅಂದಾಜು ಮಾಡಿಲ್ಲ. ಟೌನಿನಲ್ಲಿ ಮಾತ್ರ ಮನೆಗಳು ಕುಸಿದುಬಿದ್ದು ಒಂಭತ್ತು ಸಾವಿರ ರೂಪಾಯಿನಷ್ಟು ನಷ್ಟವಾಗಿದೆ. ಒಟ್ಟು ನಮ್ಮ ತಾಲ್ಲೂಕಿನಲ್ಲಿ ಆಗಿರುವ ನಷ್ಟವನ್ನು ಉತ್ಪ್ರೇಕ್ಷೆಯಿಲ್ಲದ, ಸುಳ್ಳು ಹೇಳದೆ, ನಿಜವಾಗಿ ಹೇಳುವುದಾದರೆ, (ನಗು!) ಸುಮಾರು 45–50 ಸಾವಿರ ರೂಪಾಯಿ ನಷ್ಟವಾಗಿದೆ. ಈ ಸಂಬಂಧವಾಗಿ ಮುಖ್ಯಮಂತ್ರಿಗಳಿಗೆ ಹೇಳಬೇಕಾದ ನಾಲ್ಕಾರು ವಿಷಯಗಳಿವೆ. ಉಪ್ಪಲಿಗರ ಹುಂಡಿ, ಇಮ್ಮಾವು, ಮುಳ್ಳೂರು, ಕುಳ್ಳಂಕನಹುಂಡಿ, ಹೊರಲವಾಡಿ, ನಗರ್ಲೆ, ಸುತ್ತೂರು, ತಾಯೂರು ಮುಂತಾದ ನದಿಯ ಪಕ್ಕದಲ್ಲಿರುವ ಹಳ್ಳಿಗಳ ವಿಷಯದಲ್ಲಿ ಸರ್ಕಾರದವರು ಗಮನಕೊಟ್ಟು ಆದಷ್ಟು ಒತ್ತಾಯ ಮಾಡಿ ಅವರು ಎತ್ತರವಾದ ಪ್ರದೇಶದಲ್ಲಿ ಮನೆಗಳನ್ನು ಕಟ್ಟಿಕೊಳ್ಳುವ ಹಾಗೆ ಏರ್ಪಾಡು ಮಾಡುವುದು ಬಹಳ ಮುಖ್ಯ. ಈಗ ಮಾಡಬೇಕಾದ ಮುಖ್ಯ ಸಹಾಯವೆಂದರೆ, ಈ ಹಳ್ಳಿಗಾಡಿನಲ್ಲಿರುವ ಬಡವರಿಗೆ ಪರಿಹಾರಕೊಡಬೇಕು. ಯಾವ ಯಾವ ಕಡೆ ಬೀಜವರಿ ಬಿತ್ತ ನಷ್ಟವಾಗಿದೆ ಅಲ್ಲಿ ಅದನ್ನು ಕೊಡಲು ಏರ್ಪಾಡು ಮಾಡಬೇಕು. ಅಲ್ಲದೆ ಪ್ರವಾಹದಲ್ಲಿ ಮುಳುಗಿಹೋಗಿರುವ ಪ್ರದೇಶದಲ್ಲಿ ಅನೇಕ ಬಡ ರೈತರಿದ್ದಾರೆ, ತಮ್ಮ ಜಮೀನನ್ನು ತಾವೇ ಸ್ವಂತವಾಗಿ ವ್ಯವಸಾಯ ಮಾಡುವ ರೈತರಿದ್ದಾರೆ, ಇವರಿಗೆ ಐದು ಹತ್ತು ಪಲ್ಲ ನಷ್ಟವಾದರೂ ತಡೆದುಕೊಳ್ಳುವ ಶಕ್ತಿಯಿದೆ. ಆದರೆ 'ಆಬ್ಸೆಂಟೀ ಲ್ಯಾಂಡ್ ಲಾರ್ಡ್ಸ್'ನ ಗದ್ದೆಗಳನ್ನು ಮಾಡುವ ರೈತರಿಗೆ ಈ ಶಕ್ತಿಯಿರುವುದಿಲ್ಲ. ಇಂಥವರಿಗೆ ತಕ್ಷಣ ಪರಿಹಾರ ನೀಡಬೇಕಾದುದು ಅಗತ್ಯ.

ಹಾಗೆ ತಾವು ಕೊಡಬೇಕಾದ ಪರಿಹಾರದಲ್ಲಿ ಬೀಜದ ಭತ್ತವನ್ನು ಒದಗಿಸಬೇಕಾಗುತ್ತದೆ. ಮಳೆಯ ಪ್ರವಾಹದಿಂದ ಸಾಮಾನುಗಳು ಕೊಚ್ಚಿಹೋದ 30 ಸಂಸಾರಗಳಿಗೆ ಪರಿಹಾರ ಕೊಡಬೇಕಾಗಿದೆ ಸಂಸ್ಥಾನದ ಮೂಲೆ ಎಲ್ಲೆಲ್ಲಿ ಹೀಗೆ ಪ್ರವಾಹದಿಂದ ಅನಾನುಕೂಲವಾಗಿದೆಯೋ ಅವರೆಲ್ಲರಿಗೂ ಪರಿಹಾರ ದೊರೆಯಬೇಕಾಗಿದೆ. ನಮ್ಮ ಪ್ರಾಂತ್ಯ ಒಂದೆರಡು ಕಡೆಯಲ್ಲೆ ಸುಮಾರು 40-50 ಸಹಸ್ರ ರೂಪಾಯಿಗಳಷ್ಟು ನಷ್ಟ ಉಂಟಾಗಿದೆ. ಆದರೆ ಈ ಬಗ್ಗೆ ಸರ್ಕಾರದವರು ಒಂದು ರಿಯಲ್ ಎಸ್ಟಿಮೇಟ್ ಮಾಡಿಸಿ, ಆ ಲುಕ್ಸಾನು ಎಷ್ಟಾಗಿದೆಯೆಂಬುದನ್ನು ತಿಳಿದುಕೊಳ್ಳಬೇಕೆಂದು ನನ್ನ ಮನವಿ. ಆದರೆ ಈಗಾಗಲೇ ಈ ಬಗ್ಗೆ ಸರ್ಕಾರಕ್ಕೆ ವರದಿಬಂದಿದೆಯೋ ಅಥವಾ ಇನ್ನೂ ಇಲ್ಲವೋ ಗೊತ್ತಿಲ್ಲ. ಸರ್ಕಾರಿ ಅಧಿಕಾರಿಗಳು ಸರ್ಕಾರಕ್ಕೆ ವರದಿಮಾಡತಕ್ಕ ರಿಪೋರ್ಟಿಗೆ ಸರಿಯಾಗಿ ಸಮರ್ಥನೆ ಇರುವುದಿಲ್ಲವೆಂದು ನನ್ನ ಭಾವನೆ.

ಶ್ರೀರಂಗಪಟ್ಟಣ ಮತ್ತು ಶಿವಮೊಗ್ಗಾ ಜಿಲ್ಲೆಯಲ್ಲಿ ತುಂಗಭದ್ರಾ ನದಿಯಿಂದಲೂ ಸಹ ಜನಗಳಿಗೆ ಲುಕ್ಸಾನಾಗಿದೆಯೆಂದು ತಿಳಿಯುತ್ತೇನೆ. ಆದುದರಿಂದ ಅಲ್ಲಿಗೂ ಅಧಿಕಾರಿಗಳನ್ನು ಕಳುಹಿಸಿ, ಪ್ರವಾಹದಿಂದ ನಿಜವಾಗಿಯೂ ಎಷ್ಟು ಲುಕ್ಸಾನಾಗಿದೆಯೆಂಬುದನ್ನು ತಾವು ತಿಳಿದುಕೊಂಡು ಆದಕ್ಕೆ ಸೂಕ್ತ ಪರಿಹಾರವನ್ನು ನೀಡಬೇಕು. ಹಾಗೆ ತಾವು ಮಾಡದೆಯೂ ಮತ್ತು ತಕ್ಕ ಪರಿಹಾರಗಳನ್ನು ನೀಡದೆಯೂ ಇದ್ದರೆ ತಾವು ತಮ್ಮ ಕರ್ತವ್ಯಲೋಪ ಮಾಡಿದಂತೆ ಆಗುತ್ತದೆ.

ಕೋಲಾರ-ಚಿತ್ರದುರ್ಗ ಮುಂತಾದ ಜಿಲ್ಲೆಗಳಲ್ಲಿ ಅಭಾವ ಉಂಟಾಗಿದ್ದ ಕಾಲದಲ್ಲ ಆ ಸ್ಥಳಗಳಿಗೆ ತಾವು ಹೇಗೆ ಅಪಾರ ದ್ರವ್ಯವನ್ನು ಖರ್ಚುಮಾಡಿ ಅಲ್ಲಿಯ ಅಭಾವ ಪರಿಸ್ಥಿತಿಯನ್ನು ಉತ್ತಮಪಡಿಸಿದಿರೋ ಅದೇ ರೀತಿಯಾಗಿ ಈಗ ಕೆಲವು ಪ್ರದೇಶಗಳಲ್ಲಿ ಈ ಪ್ರವಾಹದ ಹಾವಳಿಯಿಂದ ನೊಂದಿರತಕ್ಕ ಜನಗಳಿಗೆ ಏನೇನು ಅತ್ಯಗತ್ಯವಾಗಿ ಕೂಡಲೇ ಒದಗಿಸಬೇಕಾಗಿದೆಯೋ ಅಂಥ ಸಹಾಯಗಳನ್ನೆಲ್ಲಾ ತಾವು ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನನ್ನ ಪ್ರಾಂತ್ಯದಲ್ಲಿ ಈ ಪ್ರವಾಹದ ಹಾವಳಿಯಿಂದ ಏನೇನು ನಷ್ಟವಾಗಿರುತ್ತೆಂಬ ಅಂಶಗಳನ್ನು ತಿಳಿಸತಕ್ಕದ್ದು ನನ್ನ ಕರ್ತವ್ಯ. ಆದರೆ ಇದೇ ರೀತಿ ಸಂಸ್ಥಾನದ ನಾನಾ ಮೂಲೆಗಳಲ್ಲಿ ಹೀಗೆ ಪ್ರವಾಹ ಹಾವಳಿಯಿಂದ ಕಷ್ಟನಷ್ಟಗಳುಂಟಾಗಿರುವ ಎಲ್ಲ ಪ್ರದೇಶಗಳಿಗೂ ಸರ್ಕಾರದವರು ತಕ್ಕ ಪರಿಹಾರಗಳೆಲ್ಲವನ್ನೂ ನೀಡಿ, ತನ್ಮೂಲಕ ದೇಶದಲ್ಲಿ ಆಹಾರದ ಅಭಾವ ಉಂಟಾಗಲು ಅವಕಾಶವಿಲ್ಲದಂತೆ ಅವರಿಗೆ ಅನುಕೂಲಗಳನ್ನು ತಾವು ಕಲ್ಪಿಸಿಕೊಡುವಿರೆಂದೇ ನನ್ನ ಆಶಾಭಾವನೆ. ಈ ಎಲ್ಲ ಕಾರಣಗಳಿಂದ ಸರ್ಕಾರ ಅವರಿಗೆ ಪರಿಹಾರಗಳನ್ನು ನೀಡಬೇಕಾಗಿದೆ. ಹಾಗೆ ತಾವು ಸಹಾಯನೀಡುವ ಜನಗಳ ಪೈಕಿ ತತ್ರಾಪಿ ಬಡವರಿಗೂ ಮತ್ತು ಸಣ್ಣ ಸಣ್ಣ ಬಡ ಸಂಸಾರಗಳಿಗೂ ಉಂಟಾಗಿ

ರುವ ತೊಂದರೆಗಳ ನಿಜಪರಿಸ್ಥಿತಿಯನ್ನು ತಿಳಿದು ಅವರಿಗೆ ತಾವು ಸಂಪೂರ್ಣ ಪರಿಹಾರಗಳನ್ನು ನೀಡಲೇಬೇಕಾಗಿದೆಯೆಂದು ಹೇಳಿ ಈ ನನ್ನ ಅವಸರದ ಠರಾವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Sri K. HANUMANTHAIYA.—Sir, I may state now it is 15 minutes to Five and so, the Government may not have much time to reply.

Mr. SPEAKER.—I will adjust.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಸ್ವಾಮಿ, ಈಗ ಕೆಲವು ಮಾನ್ಯ ಸದಸ್ಯರುಗಳು ಈ ಪ್ರವಾಹದ ದೆಸೆಯಿಂದ ಅನೇಕ ಜನಗಳಿಗೂ, ಜಾನುವಾರುಗಳಿಗೂ ಮತ್ತು ಆಸ್ತಿ ಪಾಸ್ತಿಗಳಿಗೂ ಅಗಾಧವಾದ ಲುಕ್ಸಾನಾಗಿರುತ್ತೆಂದು ಪ್ರಸ್ತಾಪಮಾಡಿದ್ದಾರೆ. ಇದರಲ್ಲಿ ಕೆಲವು ಅಂಶಗಳು ನಿಜವಿರಬಹುದು. ಕೆಲವು ಅಂಶಗಳಲ್ಲಿ ಅವರು ಹೇಳಿರುವಷ್ಟರಮಟ್ಟಿಗೆ ಅಲ್ಲಿ ತೊಂದರೆಗಳಾಗಿರಲಾರವೆಂದು ನನಗೆನಿಸುತ್ತದೆ. ಕಾವೇರಿ ನದಿಯ ಪ್ರವಾಹದ ವಿಚಾರವೇನೋ ನನಗೆ ಗೊತ್ತಿದೆ. ಕಪಿನಿ ನದಿಯ ಪ್ರವಾಹದವಿಚಾರವನ್ನು ನಾನು ಪ್ರಸ್ತಾಪ ಮಾಡುವ ಸ್ಥಿತಿಯಲಿಲ್ಲ. ಸಾಮಾನ್ಯವಾಗಿ ಯಾವಾಗ ಈ ಪಶ್ಚಿಮವಾಹಿನಿ ಬಳಿ ಪ್ರವಾಹ ಹೆಚ್ಚಾಗಿ ಬರುತ್ತಲೇ ಇರುತ್ತದೆ. ಆಗ ಹಲವಾರು ಜಮೀನುಗಳು ನೀರು ಮುಳುಗಡೆಯಾಗುತ್ತಲೇ ಇದ್ದವು. ಈಗ ಆ ಪ್ರದೇಶದಲ್ಲಿ ಆ ರೀತಿ ನೀರು ಮುಳುಗಡೆಯಾಗಿದ್ದರೂ ಪೈರು 2-3ಅಂಗುಲವಿದ್ದು ಬಹಳ ಚೆನ್ನಾಗಿದೆ. ಪೈರೇನೂ ಅಲ್ಲಿ ನಷ್ಟವಾಗಿಲ್ಲ. ಕಾವೇರಿ ಕೃಷ್ಣರಾಜಸಾಗರ ಮತು ಬನ್ನೂರು ಈ ಗ್ರಾಮಗಳ ಅಕ್ಕಪಕ್ಕದ ಜಮೀನುಗಳೆಲ್ಲವುಗಳ ಅನುಭವವೂ ನನಗೆ ಚೆನ್ನಾಗಿದೆ. ಈ ಪ್ರದೇಶಗಳಲ್ಲಿ ಹೊಳೆಯ ಪ್ರವಾಹದಿಂದ ಅಷ್ಟೊಂದು ಅನಾಹುತ ಆಗಿದೆಯೆಂದು ಹೇಳಿರತಕ್ಕದ್ದನ್ನು ನಂಬಲು ಕಷ್ಟವಾಗಿದೆ.

ನಾನು ಒಂದು ವಿಚಾರವನ್ನು ಸರ್ಕಾರದವರ ಗಮನಕ್ಕೆತರಲು ಇಚ್ಛಿಸುತ್ತೇನೆ. 6 ಮತ್ತು 7 ನೆಯ ತಾರೀಖುಗಳಲ್ಲಿ ಎಷ್ಟು ಹೆಚ್ಚಿಗೆ ಪ್ರವಾಹ ಬರುತ್ತದೆ ಎಂಬ ಅಂಶವನ್ನು ನಿರೀಕ್ಷಣೆ ಮಾಡುವಂಥ ಅವಕಾಶವಿತ್ತು. ಅಷ್ಟೆ ಅಲ್ಲದೆ 7ನೆಯ ತಾರೀಖಿನ ದಿನ ಸಂಸ್ಥಾನಾದ್ಯಂತ ವಿಶೇಷ ಮಳೆಬೀಳುವಂಥ ಸೂಚನೆಗಳಿದ್ದುವು. ಆ ದಿವಸ ಕಾವೇರಿ, ಹೇಮಾವತಿ ಮತ್ತು ಲಕ್ಷ್ಮಣತೀರ್ಥ ಈ ನದಿಗಳು ಹರಿದು ಬರುವಂಥ ಪ್ರದೇಶದಲ್ಲಿ ವಿಶೇಷವಾಗಿ ಮಳೆ ಬಿದ್ದುದರಿಂದ ಆ ನದಿಗಳಲ್ಲೆಲ್ಲಾ ಪ್ರವಾಹ ಕ್ಷಣಕ್ಷಣಕ್ಕೂ ಏರುತ್ತಿದೆಯೆಂಬುದಾಗಿ ವರ್ತಮಾನ ಪತ್ರಿಕೆಗಳಲ್ಲಿ ಕೂಡ ಪ್ರಕಟವಾಗಿತ್ತು. 7ನೆಯ ತಾರೀಖು ಬೆಳಗ್ಗೆ 9 ಗಂಟೆಯಲ್ಲಿ ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟ 122 ಅಡಿಗಳಿರುತ್ತೆಂದೂ ಮತ್ತು ಒಂದು ಲಕ್ಷ 64 ಸಾವಿರದ ಕ್ಯೂಸೆಕ್ಸ್ ನೀರು ಬರುತ್ತಿತ್ತೆಂದು ನನಗೆ ತಿಳಿದು ಬಂದಿದೆ. ಹೀಗಿರುವಾಗ ಆ ನೆಯ ತಾರೀಖಿನ ದಿನ ಅಲ್ಲಿದ್ದ ಇಂಜನಿಯರಿಂಗ್ ಇಲಾಖಾ ಅಧಿಕಾರಿಗಳು ಮುಂಗಡವಾಗಿ ವರ್ತಿಸಿರುವುದಿಲ್ಲವೆಂಬ ಸಂಶಯ ನನಗೆ ತುಂಬ ಇದೆ. ಆ ದಿವಸ ಕೆರೆಯಲ್ಲಿ ನೀರಿನ ಮಟ್ಟ $122\frac{1}{2}$ ಅಡಿಗಳಿಗೆ ಏರಿ ಬಂದಾಗ್ಯೂ ಸಾಯಂಕಾಲವಾದರೂ ನೀರನ್ನು ಆಚೆಗೆ ಬಿಟ್ಟುಬಿಡದೆ ಬಂದ ಆ ನೀರೆಲ್ಲವನ್ನೂ ಶೇಖರ ಮಾಡುತ್ತಲೇ ಬಂದಿರುತ್ತಾರೆ. ಹಾಗೆ ನೀರನ್ನು ವಿಪರೀತವಾಗಿ ಶೇಖರಣೆ ಮಾಡುತ್ತ ಬಂದು ಕಡೆಗೆ ಇಷ್ಟೊಂದು ನೀರನ್ನು ಏತಕ್ಕಾಗಿ ಶೇಖರಣೆ ಮಾಡಿದ್ದೀರೆಂದು ತಮ್ಮ ಮೇಲೆ ದೂರುಗಳೇನಾದರೂ ಬರಬಹುದು ಎಂದು ಭಯಗ್ರಸ್ತರಾಗಿ ಅವರು ಏಕ್‌ದಂ ಆ ನೀರಿನ್ನೆಲ್ಲಾ ಆಚೆಗೆ ಬಿಟ್ಟಿದ್ದರಿಂದಲೇ ನೀರಿನ ಪ್ರವಾಹ ಆ ವೆಲ್ಲೆಸ್ಲಿ ಬ್ರಿಡ್ಜಿನ ಮೇಲೆ ಹರಿಯಲು ಕಾರಣವಾಗಿರುತ್ತದೆ. ಇದನ್ನು ತಾವು ಖಂಡಿತವಾಗಿಯೂ ವಿಚಾರಣೆ ಮಾಡಲೇ ಬೇಕಾಗಿದೆ. ಇಷ್ಟಕ್ಕೆಲ್ಲಾ ಅಲ್ಲಿರತಕ್ಕ ಇಂಜನಿಯರಿಂಗ್ ಅಧಿಕಾರಿಗಳೇ ಕಾರಣವೆಂದು ಗೊತ್ತಾಗುತ್ತದೆ. ಹಾಗೆ 1 ಲಕ್ಷ 64 ಸಾವಿರ ಕ್ಯೂಸೆಕ್ಸ್ ನೀರು ಬರುತ್ತಿದ್ದ ಆ ದಿವಸ ಚಿಕ್ಕಮಗಳೂರು ಜಿಲ್ಲೆಯಲ್ಲಿ 9 ಇಂಚುಗಳಷ್ಟು ಮಳೆ ಬಿದ್ದಿದ್ದು, ಲಕ್ಷ್ಮಣತೀರ್ಥ, ಹೇಮಾವತಿ ಮತ್ತು ಕಾವೇರಿ ಮತ್ತು ತುಂಗಭದ್ರಾ ಇತ್ಯಾದಿ ನದಿಗಳಲ್ಲೆಲ್ಲಾ ವಿಶೇಷ ಪ್ರವಾಹಗಳು ಬರುತ್ತಿದ್ದಾಗ್ಯೂ ಇವರೇಕೆ ಕೆರೆಯಲ್ಲಿ ಹಾಗೆ 120 ಅಡಿಗಳ ಮೇಲೂ ನೀರನ್ನು ತಡೆಯಬೇಕಾಗಿತ್ತು? 6ನೆಯ ತಾರಿಖು ಮೈಸೂರಿನಲ್ಲಿ ಎಲ್ಲಾ ಪೇಪರುಗಳಲ್ಲಿಯೂ ಈ ವಿಚಾರ ಬಂದಿತ್ತು. ಆ ದಿವಸ *Indian Express* ಪೇಪರಿನಲ್ಲಿ ಏನು ವಿಚಾರ ಬಂದಿತ್ತೆಂಬ ಬಗ್ಗೆ ತಮ್ಮ ಗಮನಕ್ಕ ತರಲಿಚ್ಛಿಸುತ್ತೇನೆ.—

> "As a result of heavy rains for the last one week in the catchment area, the water level in Krishnaraja Sagar is rising hour by hour and according to latest reports the level in the reservoir has risen to 118 feet this evening, six feet below the peak level."

ಹೀಗೆ ಕೆರೆಯಲ್ಲಿ ನೀರಿನ ಮಟ್ಟ ಇನ್ನೂ ಏರುತ್ತಿರುವ ಸಂದರ್ಭಚೆನ್ನಾಗಿ ಗೊತ್ತಿದ್ದರೂ ಆ ರಿಜರ್ವಾಯಿರ್‌ನ ಸೂಪರ್‌ವಿಜನ್‌ಲ್ಲಿದ್ದ ಅಧಿಕಾರಿಗಳು ಆ ಬಗ್ಗೆ ಜನರಿಗೆ ಯಾವ ಎಚ್ಚರಿಕೆಯನ್ನೂ ಕೊಟ್ಟಿರುವುದಿಲ್ಲ. ಆದರೆ ಕೆಲವು ಕಡೆ ರೆವಿನ್ಯೂ ಅಧಿಕಾರಿಗಳು ಮಾತ್ರ ನಾಳೆ ಪ್ರವಾಹ ಹೆಚ್ಚಾಗಿ ಬರಬಹುದು ಎಂಬ ಎಚ್ಚರಿಕೆಯನ್ನು ಜನರಿಗೆ ಮುಂಚಿತವಾಗಿಯೇ ಕೊಟ್ಟಿದ್ದರು. ಅದುದರಿಂದ ನಾವು ಈ ದಿವಸ ಆ ರೆವಿನ್ಯೂ ಅಧಿಕಾರಿಗಳ ಮೇಲೆ ಯಾವ ದೂರನ್ನೂ ಹೇಳುವ ಹಾಗಿಲ್ಲ. ಆಗಿನ ವೇಳೆಯಲ್ಲಿ The authorities are likely to open all the shutters of the reservoir by tomorrow and the water will be released in Cauvery. Safety measures are being taken, etc. ಎಂದು ಅವರು ತಿಳಿಸಿದ್ದಾರೆ. ಹಾಗೆ ಅವರು ಮುನ್ನೆಚ್ಚರಿಕೆಯನ್ನು ಕೊಟ್ಟಿದ್ದರೂ ಕೂಡ, ಈ ರಿಜರ್ವಾಯಿರಿನ ಮೇಲಾಡಳಿತ ನೋಡುತ್ತಿದ್ದ ಅಧಿಕಾರಿಗಳು ಹಾಗೆ ಏನನ್ನೂ ಮಾಡದೆ 7ನೆಯ ತಾರೀಖಿನ ವರೆಗೂ ಆ ಕೆರೆಯಲ್ಲಿ ನೀರಿನ ಮಟ್ಟ $124\frac{1}{2}$ ಅಡಿಗಳಿಗೆ ಬರುವವರೆಗೂ ತಡೆದು ಬಿಟ್ಟು, ಅನಂತರ ನೀರಿನ ಮಟ್ಟ ಇನ್ನೂ ಏರುತ್ತಿರುವ ವೇಳೆಯಲ್ಲಿ ಅವರು ಎಲ್ಲಾ ಸ್ಲೂಯಿಸಸ್‌ಗಳನ್ನೂ ಏಕಕಾಲಕ್ಕೇ ತೆರೆದುಬಿಟ್ಟಿದ್ದರಿಂದಲೂ ಮತ್ತು ಮೇಲೆ ನದಿಯಲ್ಲಿ 1 ಲಕ್ಷ 64 ಸಾವಿರ ಕ್ಯೂಸೆಕ್ಸ್ ನಷ್ಟು ಪ್ರವಾಹ ಒಂದೇ ಸಮವಾಗಿ ಬರುತ್ತಿದ್ದುದರಿಂದಲೂ, ಈ ಪ್ರಮಾದಗಳಿಗೂ ಮತ್ತು ಇಷ್ಟೊಂದು ಅಪಾರ ನಷ್ಟಗಳಿಗೂ ಕಾರಣವಾಯಿತು ಎಂಬುದಾಗಿ ಹೇಳುತ್ತಿದ್ದಾರೆ. ಹೀಗೆ ನೀರನ್ನೆಲ್ಲಾ ಹೊರಗೆ ಬಿಟ್ಟು ಪುನಃ 9ನೆಯ ತಾರೀಖಿನಿಂದ ನೀರನ್ನು ಶೇಖರಣೆ ಮಾಡಲು ಪ್ರಯತ್ನ ಪಟ್ಟಿದ್ದಾರೆ. ಹಾಗೆ ಅವರು ಅಷ್ಟು ಭಾರೀ ಪ್ರಮಾಣದಲ್ಲಿ ನೀರನ್ನು ಆಚೆಗೆ

(ಶ್ರೀ ಕೆ. ಪುಟ್ಟಸ್ವಾಮಿ.)

ಬಿಡದೆ ಹೋಗಿದ್ದರೆ ಈ ರೀತಿಯಾಗಿ ಪುನಃ 9ನೆಯ ತಾರೀಖು ನೀರನ್ನು ಮಾತ್ರ ಶೇಖರಣೆ ಮಾಡಲು ಅವರಿಗೆ ಸಾಧ್ಯವಿರುತ್ತಿರಲಿಲ್ಲ. 9ನೆಯ ತಾರೀಖು ಕಾವೇರಿ ನದಿಯ ಪಾತ್ರದಲ್ಲೆಲ್ಲಾ ಕಲ್ಲುಗಳು ಕಾಣುತ್ತಿದ್ದವು. ಹೀಗೆ ಅವರು ಅಪಾರವಾಗಿ ನೀರನ್ನು ಒಮ್ಮೆ ಬಿಡದೆ ಇದ್ದಲ್ಲಿ ಹಾಗೆ ಆ ವೆಲ್ಲಸ್ಲಿ ಬ್ರಿಡ್ಜಿನ ಮೇಲೆ 2-3 ಅಡಿಗಳಷ್ಟು ನೀರು ಹರಿಯಲು ಅವಕಾಶವಿರುತ್ತಿರಲಿಲ್ಲ. ಆ ನೀರಿನ ಪ್ರವಾಹಕ್ಕೆ ಹೊಡೆತಕ್ಕೆ ಸಿಕ್ಕಿ ಒಂದು ದೇವಸ್ಥಾನ ಸಹ ಕೊಚ್ಚಿ ಹೋಗಿದೆ. ಬೆಂಗಳೂರು, ಮೈಸೂರು ರಸ್ತೆ ಸಂಚಾರ ಸಹ ನಿಂತು ಹೋಗಿತ್ತು. 9ನೆಯ ತಾರೀಖಿನಿಂದ ಆ ಪ್ರವಾಹ ಇಳಿದು ಹೋಯಿತು. ಅಷ್ಟೊಂದು ಅಗಾಧವಾದ ನೀರನ್ನೆಲ್ಲಾ ಆ 7ನೆಯ ತಾರೀಖು ರಾತ್ರಿ ಒಂದೇ ದಿವಸದಲ್ಲಿ ಆಚೆಗೆ ಬಿಟ್ಟಿದ್ದೇ ಇಷ್ಟೆಲ್ಲಾ ತೊಂದರೆಗಳಿಗೆ ಕಾರಣವಾಯಿತು. ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವನ್ನು 124 ಅಡಿಗಳಿಗೆ ಹೋಗುವತನಕ ನೀರನ್ನು ಶೇಖರಣೆ ಮಾಡುತ್ತಿದ್ದರೆ ಈ ಅನಾಹುತಗಳನ್ನು ತಪ್ಪಿಸುವ ಆವಶ್ಯಕತೆ ಕೂಡ ಬರುತ್ತಿರಲಿಲ್ಲ. ಇಂಥ ದೊಡ್ಡ ದೊಡ್ಡ ಜಲಾಶಯಗಳಿಗೆ ಕಟ್ಟೆಯನ್ನು ಹಾಕುವುದು ಇಂಥ ಹಾವಳಿಯನ್ನು ತಪ್ಪಿಸುವುದಕ್ಕಾಗಿಯೇ ಎಂಬುದು ಅನೇಕರಿಗೆ ತಿಳಿದೇ ಇದೆ. ಇಂಥಾ ವಿಚಾರಗಳನ್ನೆಲ್ಲಾ ಮನಗಂಡಿದ್ದಾಗ್ಯೂ ಅವರು ಮುನ್ನೆಚ್ಚರಿಕೆಯನ್ನು ಕೈಗೊಳ್ಳದಿದ್ದುದೇ ಅಲ್ಲದೆ ಅಲ್ಲಿದ್ದ ಅಧಿಕಾರಿಗಳು ತಮ್ಮ ಮನಸ್ಸೇಚ್ಛೆ ಅಲ್ಲಿ ನೀರನ್ನು ತಡೆದಿದ್ದು ಈ ಪ್ರವಾಹದ ಹಾವಳಿಗೆ ಕಾರಣವಾಯಿತು. 7ನೆಯ ತಾರೀಖು ಅವರು ಅಲ್ಲಿ 124 ಅಡಿ ನೀರು ಬಂದಮೇಲೆ, 124 ಅಡಿ ನೀರನ್ನೂ ಇಟ್ಟು ಕೊಂಡು ಮೇಲಿಂದ ಬರುತ್ತಿದ್ದ ನೀರನ್ನು ಮಾತ್ರ ಹೊರಕ್ಕೆ ಬಿಟ್ಟಿದ್ದರೆ ಅಷ್ಟೊಂದು ತೊಂದರೆಯಾಗುತ್ತಿರಲಿಲ್ಲ. ಹಾಗೆ ಮಾಡದೆ ಅಲ್ಲಿದ್ದ ನೀರನ್ನೂ ಬಿಟ್ಟಿದ್ದರಿಂದಲೇ 9ನೆಯ ತಾರೀಖು ಪುನಃ ನೀರನ್ನು impound ಮಾಡಬೇಕಾದ ಅವಶ್ಯಕತೆ ಬಂತು. ಅಲ್ಲಿ ಸಾಮಾನ್ಯವಾಗಿ ಇಂಥ ಪ್ರವಾಹ ಬರುತ್ತದೆ ಎಂಬುದನ್ನು ನಾವು ತಿಳಿಯಬೇಕು. ಜುಲೈ ಅಂತ್ಯದಲ್ಲಿ ಒಂದು ಪ್ರವಾಹ ಬರುತ್ತದೆ; ಮತ್ತೆ ಉಪವಾಸದ ಹೊಳೆ ಎಂದು ಬೇರೆ ಬರುತ್ತದೆ.

Sri L. SIDDAPPA (Channagiri).—He started saying, that the version given on this side is a very exaggerated one. Now he gives a very fearful account.

ಶ್ರೀ ಕೆ. ಪುಟ್ಟಸ್ವಾಮಿ.—ಅಷ್ಟಕ್ಕೂ ಅಲ್ಲೇನೂ ಅಂಥ ಹಾವಳಿಯಾಗಿಲ್ಲವೆಂದೇ ನಾನು ಹೇಳುತ್ತಿದ್ದೇನೆ. ಈಗ ಆಗಿರುವ ನಷ್ಟವನ್ನೂ ಕೂಡ ತಪ್ಪಿಸಬಹುದಿತ್ತು ಎಂಬುದೇ ನನ್ನ ಈಗಿನ ವಾದ. 7ನೆಯ ತಾರೀಖಿನ ದಿನ ಅಧಿಕಾರಿಗಳು ಅಲಕ್ಷ್ಯದಿಂದಿದ್ದುದು, ಅಧಿಕಾರಿಗಳು ದೂರದರ್ಶಿತ್ವದಿಂದ ವರ್ತಿಸದಿದ್ದುದು, ತಾವು ಶೇಖರಣೆ ಮಾಡಿದ ನೀರನ್ನೂ ಬಿಟ್ಟಿದ್ದುದು ಇಷ್ಟೊಂದು ಅನಾಹುತಕ್ಕೆ ಕಾರಣವಾಯಿತು. ಈ ರೀತಿ ಮನೆಗಳು ಕೊಚ್ಚಿ ಹೋಗುವುದಕ್ಕೂ, ಹೊಲ ಗದ್ದೆಗಳಮೇಲೆ ನೀರು ಹರಿದು ಪೈರು ನಷ್ಟವಾಗುವುದಕ್ಕೂ ಕಾರಣವಾಯಿತು ಎಂಬುದನ್ನು ನಾನು ಹೇಳಬಯಸುತ್ತೇನೆ.

ಆಮೇಲೆ, ಕಪಿನಿ ನದಿಯ ವಿಚಾರದಲ್ಲಿ ಒಂದೇ ಒಂದು ಮಾತು. ಕಪಿನೀ ನದಿಯ ಇಕ್ಕೆಲಗಳಲ್ಲೂ ಇರುವ ಜಮೀನು ಸಾಮಾನ್ಯವಾಗಿ ಕೆಳಮಟ್ಟದ ಜಮೀನು; ಯಾವ ಪ್ರವಾಹ ಬಂದರೂ ಅವುಗಳಮೇಲೆ ನೀರು ಹರಿದೇ ಹರಿಯುತ್ತದೆ. ಟಿ. ನರಸೀಪುರದಲ್ಲಿ ಗದ್ದೆಗಳು ನೀರಿನಿಂದ ಮುಳುಗಿಹೋದುವೆನ್ನುವುದೇನು ಹೆಚ್ಚಲ್ಲ.

ಶ್ರೀ ಎಂ. ಲಿಂಗಣ್ಣ.—ನಾವು ಹೇಳುತ್ತಿರುವುದು, 1924ನೆಯ ಇಸವಿಯಿಂದ ಈವರೆಗೆ ಎಂದೂ ಈ ಮಟ್ಟಿನ ಹೊಳೆ ಬಂದು ಇಷ್ಟೊಂದು ಜಮೀನು ಮುಳುಗಡೆ ಯಾಗಿರಲಿಲ್ಲ ಎಂದು. ಅವರು ವಾಸ್ತವಾಂಶಗಳನ್ನು ನೋಡದೆ, ತಿಳಿಯದೆ ಹೇಳುತ್ತಿರುವುದನ್ನು ಕೇಳಿ ನಾನು ವಿಷಾದಪಡುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಅಷ್ಟೊಂದು ಹೊಳೆ ಬರದಿರಬಹುದು. ಅಂತೂ, ಯಾವ ಸ್ವಲ್ಪ ಹೊಳೆ ಬಂದರೂ ಅಲ್ಲಿನ ಜಮೀನುಗಳು ಮುಳುಗಿಹೋಗುತ್ತವೆಂಬುದು ನಿಜ. ಪ್ರತಿ ವರ್ಷವೂ ಮುಳುಗಡೆಯಾಗುತ್ತದೆ. ಇದು ಮುಖ್ಯವಾಗಿ ತಪ್ಪಿಸಬೇಕಾದರೆ ಏನು ಮಾಡಬೇಕೆಂಬದನ್ನು ಈಗ ನಾವು ಯೋಚನೆ ಮಾಡಬೇಕು.

ಹಿಂದೆ ಕೃಷ್ಣರಾಜಸಾಗರವನ್ನು ಕಟ್ಟುವಾಗಲೇ ನಮ್ಮ ದೇಶದ ಎಂಜನಿಯರುಗಳು ಕಪಿನೀ ನದಿಗೂ ಒಂದು ಜಲಾಶಯವನ್ನು ಕಟ್ಟಬೇಕೆಂದು ಹೇಳಿ, ಆ ಕಾಲದಲ್ಲೇ ಅಂದಾಜನ್ನು ಕೂಡ ತಯಾರುಮಾಡಿದ್ದರು; ಸರ್ಕಾರದವರು ಕೂಡ ಅದನ್ನ ಮಂಜೂರು ಮಾಡಿದ್ದರು. ಆ ಪ್ರಕಾರ ಕಪಿನೀ ನದಿಗೆ ಒಂದು ಜಲಾಶಯವನ್ನು ಕಟ್ಟಿದರೆ, ಕಪಿನೀ ನದಿಯಲ್ಲಿ ಬರುವ ಪ್ರವಾಹದ ಹಾವಳಿ ಬಹುಮಟ್ಟಿಗೆ ತಪ್ಪುತ್ತದೆ. ಇದರಿಂದ ಕಪಿನೀ ನದಿಯ ಇಕ್ಕೆಲಗಳ ಜನರಿಗೆ ಸಹಾಯವಾಗುವುದಲ್ಲದೆ, ಕೃಷ್ಣರಾಜಸಾಗರದಿಂದ ಆಗತಕ್ಕ ಸಂಪೂರ್ಣ ಪ್ರಯೋಜನವನ್ನು ಪಡೆಯುವುದಕ್ಕೂ ಅವಕಾಶವಾಗುತ್ತದೆ. ಏಕೆಂದರೆ, ಈಗಲೂ ಮಳವಳ್ಳಿಯ ತಾಲ್ಲೂಕಿನಲ್ಲಿ ಪೂರ್ತಿ ನಾಲೆಯಾಗಿದ್ದರೂ ಅಲ್ಲಿಗೆ ಸಂಪೂರ್ಣವಾಗಿ ಬೇಕಾದಷ್ಟು ನೀರನ್ನು ಕೊಡುವುದಕ್ಕೆ ನಮಗೆ ಸಾಧ್ಯವಾಗಿಲ್ಲ. ಖುಷ್ಕಿ ಫಸಲೂ ಇಲ್ಲ ಮತ್ತು ತರಿ ಫಸಲೂ ಇಲ್ಲದಹಾಗಾಗಿದೆ. ನಾಲೆಗಳಿಗೆ ನಾವು ನೀರನ್ನು ಒದಗಿಸುವುದಕ್ಕೆ ಆಗುತ್ತಿಲ್ಲ. ಆದ್ದರಿಂದ, ಈ ರೀತಿ ಪ್ರವಾಹದ ಹಾವಳಿಯನ್ನು ತಪ್ಪಿಸುವುದಕ್ಕೆ ಕಪಿನೀ ಜಲಾಶಯವನ್ನು ಮಾಡಿದರೆ ಶಿವನಸಮುದ್ರದಲ್ಲಿ ವಿದ್ಯುಚ್ಛಕ್ತಿ ತಯಾರಿಕೆಗೆ ಅದರ ನೀರನ್ನು ಉಪಯೋಗಿಸಿಕೊಂಡು, ಕೃಷ್ಣರಾಜಸಾಗರದಲ್ಲಿ ಶೇಖರಿಸಿದ ನೀರನ್ನು ವ್ಯವಸಾಯಕ್ಕೆ ಪೂರ್ತಿಯಾಗಿ ಉಪಯೋಗಿಸಬಹುದು. ಈ ದೃಷ್ಟಿಯಿಂದ ಸರ್ಕಾರದವರು ಕಪಿನೀ ಜಲಾಶಯ ನಿರ್ಮಾಣ ಕಾರ್ಯವನ್ನು ಬೇಗ ತೆಗೆದುಕೊಳ್ಳಬೇಕು.

ಇನ್ನು ಮಾನ್ಯ ಮಿತ್ರರು ಹೇಳಿರುವ ನಷ್ಟಗಳ ವಿಚಾರ ಹೇಳುವುದಾದರೆ, ವಾಸ್ತವವಾಗಿ ಶ್ರೀರಂಗಪಟ್ಟಣ ಮತ್ತು ಫ್ರೆಂಚ್‌ರಾಕ್ಸ್ ತಾಲ್ಲೂಕುಗಳಲ್ಲಿ ಆಗಿರುವ ನಷ್ಟ ಸ್ವಲ್ಪ ಮಾತ್ರ ಎಂತಲೇ ಹೇಳಬೇಕು. ಪಾಂಡವಪುರ ತಾಲ್ಲೂಕಿನಲ್ಲಿ ಯೆಣ್ಣೆಹೊಳೆ ಕೊಪ್ಪಲಿನಲ್ಲಿ 2-3 ಮನೆಗಳು ಹೋಗಿರಬಹುದು. ಶ್ರೀನಿವಾಸ ಅಗ್ರಹಾರದ ಹತ್ತಿರ ಒಂದೇ ಒಂದು ಮನೆ ಹೋಗಿದೆ ಅಷ್ಟೆ. ಅಲ್ಲದೆ ನದಿಯ ಪಕ್ಕದಲ್ಲಿ ಜಮೀನುಗಳಲ್ಲಿ ವ್ಯವಸಾಯಮಾಡುವ ರೈತರು ಈ ಕಷ್ಟನಷ್ಟಗಳಿಗೆ ಹೊಂದಿಕೊಂಡಿರುತ್ತಾರೆ. ಆ ಜಮೀನುಗಳಿಗೆ ಇರುವ ಆತಂಕವನ್ನು ಅರಿತೆ ಅವರು ವ್ಯವಸಾಯಮಾಡುತ್ತಾರೆ. ಆಮೇಲೆ, ಶ್ರೀ ಲಿಂಗಣ್ಣನವರು ಮಲ್ಲನಮೂಲೆಯಲ್ಲಿ ಕಪಿನಿ ಹೊಳೆಯ ವಿಚಾರ ಹೇಳಿದರು. ಅಲ್ಲೇನೂ ಅನಾಹುತವಾಗಿಲ್ಲ. ಅವರು ಹೇಳಿದಂತೆ

ಕಪಿನಿ ನದಿಯ ವಿಷಯದಲ್ಲಿ ಜಮೀನುಗಳ ಮೇಲೆ ಪ್ರವಾಹ ಹರಿದಾಗ ರೈತರೇನೂ ಅಷ್ಟೊಂದು ವ್ಯಥೆಪಡುವುದಿಲ್ಲ. ಅದಕ್ಕೆ ಬದಲು ಅವರು ಸಂತೋಷದಿಂದ ನಿದ್ದೆಮಾಡುತ್ತಾರೆಂದೇ ಹೇಳಬಹುದು. ಏಕೆಂದರೆ, ಒಂದುಸಾರಿ ಹೊಳೆ ಹರಿದರೆ, ನೀರಿನ ಜೊತೆಯಲ್ಲಿ ಮೆಕ್ಕಲು ಮಣ್ಣು ಬಂದು ಮುಂದೆ ಆ ಜಮೀನಿಗೆ 10 ವರ್ಷಗಳ ಕಾಲ ಇನ್ನೇನೂ ಗೊಬ್ಬರ ಹಾಕಬೇಕಾಗುವುದಿಲ್ಲ; ಅಷ್ಟು ಫಲವತ್ತಾಗುತ್ತದೆ.

ಆದ್ದರಿಂದ ಈ ಸಮಯದಲ್ಲಿ ಸರ್ಕಾರದವರು ನಾನು ಹೇಳಿದ ಈ ಒಂದೆರಡು ವಿಷಯಗಳನ್ನು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು, ಕೃಷ್ಣರಾಜಸಾಗರದಲ್ಲಿ ಅಲ್ಲಿದ್ದ ಅಧಿಕಾರಿಗಳು ಸರಿಯಾಗಿ ಎಲ್ಲ ವಿಷಯಗಳನ್ನೂ ಮನಗಂಡು ಸೂಕ್ತ ವ್ಯವಸ್ಥೆ ಮಾಡಿದ್ದರೇ ಎಂಬುದು. ಇನ್ನೊಂದು, ಕಪಿನಿ ಜಲಾಶಯವನ್ನು ನಿರ್ಮಾಣಮಾಡುವುದರಿಂದ ಈ ಪ್ರವಾಹದ ಹಾವಳಿಯನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುವುದು. ಈಗ ಮೈಸೂರು ಬೆಂಗಳೂರು ರಸ್ತೆಯಲ್ಲಿ ಸಂಚಾರ ಕಡಿದುಹೋಗಿದೆ. ಇದನ್ನು ಜಾಗ್ರತೆ ಸರಿಪಡಿಸಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

(The Chief Minister Rose.)

ಶ್ರೀ ಮುಲ್ಕ ಗೋವಿಂದರೆಡ್ಡಿ.—A point of order, Sir; ನಿಲುವಳಿ ಸೂಚನೆ ಸಾಮಾನ್ಯವಾಗಿ 4 ಗಂಟೆಗೆ ಷುರುವಾಗಿ 6 ಗಂಟೆಯವರೆಗೂ ಅದರ ಮೇಲೆ ಚರ್ಚೆ ನಡೆಸಬಹುದೆಂದಿದೆ. ಅದರಂತೆ ತಾವು ನಮಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕು.

(The Chief Minister Rose.)

Mr. SPEAKER.—The rules are clear. Please refer Nos. 45, 46, 47 and so on. The debate will last for two hours if the House so desires. There can be no dispute, no two opinions about it, but it is left to the Speaker also according to rule 150 to give chances to such of the members as desire to speak in preference to others. The Hon'ble Chief Minister has some other urgent work. I give him first preference. If others want to take part in the debate, they are at liberty to do so, but the debate can last for two hours only, *i.e.*, up to ten minutes to 6—we commenced at 10 minutes to four.

ಶ್ರೀ ಕೆ. ಹನುಮಂತಯ್ಯ (ಮುಖ್ಯಮಂತ್ರಿಗಳು).—ಸ್ವಾಮಿ, ಈ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದ ಮಾನ್ಯ ಸದಸ್ಯರಿಗೂ ಮತ್ತು ಅದರ ವಿಷಯವಾಗಿ ಮಾತನಾಡಿದ ಮಾನ್ಯಸದಸ್ಯರುಗಳಿಗೂ ಮತ್ತು ಸರ್ಕಾರಕ್ಕೂ ಈ ಕಷ್ಟವನ್ನು ಪರಿಹಾರಮಾಡತಕ್ಕಂಥ ವಿಷಯದ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಈ ದಿವಸ, ಅನೇಕ ಮಾನ್ಯಸದಸ್ಯರುಗಳು ಪ್ರವಾಹದಿಂದ ಆಗಿರತಕ್ಕಂಥ ಕಷ್ಟ ಮತ್ತು ನಷ್ಟಗಳನ್ನು ವಿವರಿಸಿದ್ದಾರೆ. ಆದರೆ, ವಿವರಣೆಮಾಡುವಾಗ ತೂಕಮಾಡಿ ಕಷ್ಟನಷ್ಟಗಳು ಇಷ್ಟೇ ಆಗಿವೆಯೆಂದು ನಿರ್ಧರಿಸಿ ಹೇಳುವುದಕ್ಕೆ ಸರ್ಕಾರದವರಿಗೂ ಆಗುವುದಿಲ್ಲ ಮಾನ್ಯಸದಸ್ಯರಿಗೂ ಆಗುವುದಿಲ್ಲ. ಒಟ್ಟಿನಲ್ಲಿ ಯಾರೇ ಆಗಲಿ, ಅವರವರ ಮನಸ್ಸಿನ ಮೇಲೆ ಆದ ಪರಿಣಾಮವನ್ನು ಮಾತ್ರ ಈ ಸಭೆಯಲ್ಲಿ ವಿವರಿಸಬಹುದೆಂದು ಹೇಳಬಹುದು, ಅಷ್ಟೆ.

Mr. SPEAKER.—Sri Linganna says '48,000 Rs.'; not even Rs. 50,000.

Sri R. CHANNIGARAMIAH (Koratagere—Madhugiri—Scheduled Castes).—But he forgot to mention annas.

Sri L. SIDDAPPA.—He did not say 48 lakhs.

ಶ್ರೀ ಕೆ. ಹನುಮಂತಯ್ಯ.—ಪ್ರವಾಹ ಬಂದದ್ದೇನೋ ನಿಜ. ಪ್ರವಾಹ ಬಂದದ್ದರಿಂದ ದೇಶದಲ್ಲಿ ಹೆಚ್ಚಾಗಿ ಸಂತೋಷವೇ ಉಂಟಾಗಿದೆಯೆಂಬದನ್ನು ಕೂಡ ನಾವು ಒಪ್ಪಿಕೊಳ್ಳಬೇಕು; ಈ ದಿವಸ ಯಾರು ಪರಿಹಾರವನ್ನು ಕೇಳುತ್ತಿದ್ದಾರೋ ಆ ಮಾನ್ಯ ಸದಸ್ಯರು ಚೀಫ್ ಮಿನಿಸ್ಟರ್‌ರವರ ರಿಲೀಫ್ ಫಂಡಿನಿಂದ ಕೂಡ ಇದಕ್ಕಾಗಿ ಸಹಾಯ ದೊರೆಯಬೇಕೆಂದು ಕೇಳುತ್ತಿದ್ದಾರೆ. ಅನಾವೃಷ್ಟಿದಶೆಯಿಂದ ಉಂಟಾದ ನಷ್ಟಕ್ಕಾಗಿ ಸ್ಥಾಪಿಸಲ್ಪಟ್ಟಿರುವ ಈ ಪರಿಹಾರ ನಿಧಿಯನ್ನು ಅತಿವೃಷ್ಟಿದಶೆಯಿಂದ ಉಂಟಾದ ಕಷ್ಟಪರಿಹಾರಕ್ಕಾಗಿ ಉಪಯೋಗಿಸುವಂತೆ ಅವಕಾಶವನ್ನು ದೇವರು ಒದಗಿಸಿದ್ದಾನಲ್ಲ ಎಂಬುದೇ ನನಗೊಂದು ಸಂತೋಷ.

ನಾನು ಆ ಸ್ಥಳಕ್ಕೆ ನನ್ನ ಸಹೋದ್ಯೋಗಿಗಳೊಡನೆ ಹೋದಾಗ ಅಲ್ಲಿ ಕಷ್ಟಕ್ಕೊಳಗಾಗಿದ್ದವರ ಮುಖದ ಮೇಲೂ ಕೂಡ ಈ ಪ್ರವಾಹದ ದೆಶೆಯಿಂದ ಸಂತೋಷ, ಸಮಾಧಾನಗಳೇ ಕಾಣಬರುತ್ತಿದ್ದುವು.

5 P.M.

ಅಲ್ಲಿ ನಾನು ಜನಗಳಮಧ್ಯೆ ನಿಂತು ಪ್ರಶ್ನೆಗಳನ್ನು ಕೇಳಿದಾಗ, ಅವರು ಕೊಡುತ್ತಿದ್ದ ಉತ್ತರಗಳಿಂದ ಒಂದಂಶ ವ್ಯಕ್ತಪಟ್ಟಿತು. ಅಷ್ಟು ಪ್ರವಾಹ ಬಂದು ತಮಗೆ ನಷ್ಟವಾಗಿದ್ದರೂ ಒಟ್ಟು ದೇಶಕ್ಕೇ ಒಂದು ಸುಭಿಕ್ಷದೆಶೆ ಉಂಟಾಗಿರುವುದಕ್ಕಾಗಿ ಅವರಲ್ಲ ಒಂದು ಸಮಾಧಾನ ತೋರಿತು. ಇದು ಅವರ ಉದಾರ ಮನಸ್ಸನ್ನು ತೋರಿಸುತ್ತದೆ. ಅಲ್ಲಲ್ಲಿ ಕೆಲವರಿಗೆ ಸ್ವಲ್ಪ ಕಷ್ಟವಾದರೂ ಕೂಡ, ಇಡೀ ದೇಶಕ್ಕೇ ಸುಭಿಕ್ಷವಾದುದನ್ನು ನೋಡಿ ಅವರು ಸಂತೋಷಪಟ್ಟುದನ್ನು ನೋಡಿದರೆ, ತಮಗೆ ಕಿಂಚಿತ್ ಕಷ್ಟವಾದರೂ ದೇಶಕ್ಕೇ ಒಳ್ಳೆಯದಾಯಿತಲ್ಲಾ ಎಂದು ಸಮಾಧಾನಪಡುವ ದೊಡ್ಡ ಮನಸ್ಸು ಅವರಲ್ಲಿ ಕಂಡುಬರುತ್ತದೆ.

ಶ್ರೀಗಳಾದ ಶ್ರೀನಿವಾಸಯ್ಯಂಗಾರ್ಯರು ಮತ್ತು ಲಿಂಗಣ್ಣನವರು ವಿವರಿಸಿರುವ ಕಷ್ಟನಷ್ಟಗಳು ಆಗಿವೆ. ಎಷ್ಟು ಪ್ರಮಾಣದಲ್ಲಿ ಆಗಿವೆಯೆಂಬುದನ್ನೂ ಅವರು ಹೇಳಿದ್ದಾರೆ. ಸರಿಯಾಗಿ ಇಷ್ಟೇ ನಷ್ಟವಾಗಿದೆಯೆಂದು ಗೊತ್ತುಮಾಡಿ ಹೇಳುವುದಕ್ಕಾಗಿ ಒಬ್ಬರು ವಿಶೇಷಾಧಿಕಾರಿಗಳ ನೇಮಕಮಾಡಬೇಕೆಂದು ಹೇಳಿದ್ದಾರೆ. ಉತ್ಪ್ರೇಕ್ಷೆಮಾಡಿ ಇಷ್ಟು ನಷ್ಟವಾಯಿತೆಂದು ಹೇಳಿದರೆ, ಅದು ಬೇರೆ ವಿಷಯ. ಆದರೆ, ಇದಕ್ಕಾಗಿಯೇ ಬೇರೊಬ್ಬರು ವಿಶೇಷಾಧಿಕಾರಿಗಳನ್ನು ನೇಮಕಮಾಡುವುದು ಬೇಕೇ ಬೇಡವೇ ಎಂಬುದು ಒಂದುಪ್ರಶ್ನೆ. ಹಾಗೆ ನೇಮಕ ಮಾಡಿದರೆ, ಅವರ ಸಂಬಳ ಸಾರಿಗೆಗಳಿಗೆ ಎಷ್ಟು ಖರ್ಚಾಗುತ್ತವೆ, ಅವರ ಸಿಬ್ಬಂದಿಗೆ ಎಷ್ಟು ಖರ್ಚಾಗುತ್ತದೆ, ಆ

(ಶ್ರೀ ಕೆ. ಹನುಮಂತಯ್ಯ.)

ಖರ್ಚನ್ನೇ ನೊಂದ ಜನರಿಗೆ ವಿನಿಯೋಗಮಾಡಿದರೆ ಒಳ್ಳೆಯದಲ್ಲವೆ ಎಂಬುದನ್ನೂ ಯೋಚಿಸಬೇಕಾಗಿದೆ. ಸರ್ಕಾರಿ ಅಧಿಕಾರಿಗಳೂ ಸಾರ್ವಜನಿಕ ಮುಖಂಡರೂ, ನಾನೇ ಕಣ್ಣಾರೆ ಕಂಡಹಾಗೆ, ಅಪ್ರಾರ್ಥಿತರಾಗಿ, ತಾವಾಗಿಯೇ ಈ ಕಾರ್ಯದಲ್ಲಿ ತೊಡಗಿದ್ದಾರೆ. ಜನರ ಕಷ್ಟನಷ್ಟಗಳನ್ನು ಕಂಡುಹಿಡಿದು ಪರಿಹಾರ ನೀಡಲು ಹಗಲೂ ರಾತ್ರಿ ದುಡಿಯುತ್ತಾ ತಾವು ಯಾವ ಕಾರ್ಯಕ್ರಮ ಕೈಕೊಳ್ಳಬೇಕೋ ಅದನ್ನು ಕೈಕೊಂಡಿದ್ದಾರೆ. ಈ ವಿಷಯದಲ್ಲಿ ಸರ್ಕಾರಿ ಅಧಿಕಾರಿಗಳಿಗೂ ಸಾರ್ವಜನಿಕ ಮುಖಂಡರಿಗೂ ನನ್ನ ಅಭಿನಂದನೆಗಳನ್ನರ್ಪಿಸಬೇಕಾಗಿದೆ.

ಮೊಟ್ಟಮೊದಲನೆಯ ವಿಷಯ, ಎಲ್ಲೆಲ್ಲಿ ಮನೆಗಳು ಕುಸಿದು ಬಿದ್ದಿವೆಯೋ ಆ ಜನರಿಗೆ ಏನು ಪರಿಹಾರವನ್ನೊದಗಿಸಬೇಕೆಂಬುದು. ನಾನೇ ಕಣ್ಣಾರೆ ನೋಡಿದ ಹಾಗೆ, ನಂಜನಗೂಡು ಟೌನ್ ಮತ್ತು ಟಿ.-ನರಸೀಪುರ ಟೌನುಗಳಲ್ಲಿ ಮನೆಗಳು ಕುಸಿದು ಬಿದ್ದಿವೆ. ಡೆಪ್ಯುಟೀ ಕಮೀಷನರವರು ಈ ಸಂಬಂಧವಾಗಿ ಒಂದು ಪಟ್ಟಿಯನ್ನು ಕಳುಹಿಸಿದ್ದಾರೆ. ಹಳ್ಳಿಗಳು ಹೆಚ್ಚಾಗಿ ಆ ನದಿಯ ದಡದಲ್ಲಿಲ್ಲ, ಪಟ್ಟಣಗಳು ಮಾತ್ರ ಹೆಚ್ಚಾಗಿವೆ. ಅದರಲ್ಲಿಯೂ ಟಿ.-ನರಸೀಪುರದಲ್ಲಿ ಎರಡು ಹೊಳೆಗಳು ಒಂದೇ ಕಡೆ ಸೇರುವುದರಿಂದ, ಹೆಚ್ಚು ನಷ್ಟವಾಗುವುದು ಸ್ವಾಭಾವಿಕ. ಆದುದರಿಂದಲೇ ನಾನು ಅಲ್ಲಿಗೆ ಹೋದ ದಿವಸ ಅಲ್ಲಿ ಮನೆಗಳನ್ನು ಕಟ್ಟುವುದಕ್ಕಾಗಿ ಹತ್ತು ಸಾವಿರ ರೂಪಾಯಿಗಳನ್ನು ಸರ್ಕಾರವು ಕೊಡುತ್ತದೆ ಎಂದು ವಾಗ್ದಾನ ಮಾಡಿದೆ. ಮಾನ್ಯ ಸದಸ್ಯರು ಒಂದು ವಿಷಯವನ್ನು ಮನಗಾಣಬೇಕು. 1924 ರಲ್ಲಿ ಬಂದಥ ಪ್ರವಾಹ ಬಂದರೆ ಕಷ್ಟಕ್ಕೆ ತುತ್ತಾಗುತ್ತೇವೆಂದು ಜನರು ಮನಗಂಡರೂ ಕೂಡ, ಅವರು ಬೇರೆಕಡೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಟಿ ನರಸೀಪುರದ ಮುನಿಸಿಪಾಲಿಟಿಯವರು ಬೇರೆ ಕಡೆ ಸೈಟುಗನ್ನು ಮಾಡಿಕೊಟ್ಟರೂ ಕೂಡ ಆ ಜನರು ಅಲ್ಲಿಗೆ ಹೋಗಿ ಮನೆಗಳನ್ನು ಕಟ್ಟಿಕೊಳ್ಳಲಿಲ್ಲ. ಈ ವಿಷಯವು ಶ್ರೀ ಶ್ರೀನಿವಾಸಯ್ಯಂಗಾರ್ಯರಿಗೂ ಗೊತ್ತಿದೆ. ಹೀಗಿರುವಾಗ, ಇದರಲ್ಲಿ ಪ್ರಜೆಗಳ ಜವಾಬ್ದಾರಿ ಎಷ್ಟಿದೆ ಎಂಬುದನ್ನು ನೋಡಬೇಕು. ಸರ್ಕಾರದವರೇ ಎಲ್ಲ ಕೆಲಸಗಳನ್ನೂ ಮಾಡಬೇಕೆ, ಪ್ರಜಾವರ್ಗದವರು ಏನು ಮಾಡಿದರೆ ಒಳ್ಳೆಯದು ಅಥವಾ ತಪ್ಪು ಎಂಬುದನ್ನೆಲ್ಲಾ ಸಮರ್ಥನೆಮಾಡುವ ಗೊಡವೆಗೆ ನಾವು ಈಗ ಹೋಗಬಾರದು. ಆದರೂ ಈ ದಿವಸ ಅಲ್ಲಿ ಕುಸಿದು ಬಿದ್ದಿರುವ ಮನೆಗಳನ್ನು ಆ ಸ್ಥಳದಲ್ಲಿ ಕಟ್ಟಿದುದು ಬಹುಮಟ್ಟಿಗೆ ಅವರದೇ ಜವಾಬ್ದಾರಿ. ಟಿ.-ನರಸೀಪುರದಲ್ಲಿ ಪ್ರವಾಹ ಬಂದರೆ ಕೆಲವು ಪ್ರದೇಶಗಳು ಮುಳುಗುತ್ತವೆ; ಇಂಥ ಪ್ರದೇಶವೊಂದರಲ್ಲಿ ಒಂದು ಥಿಯೇಟರನ್ನು ಕಟ್ಟಿದ್ದಾರೆ! ನಾನು ನೋಡಿದಹಾಗೆ ಅದರಲ್ಲಿ ಮೂರಡಿ ನೀರು ನಿಂತಿತ್ತು. ಪ್ರವಾಹ ಬಂದರೆ, ನೀರು ಯಾವ ಮಟ್ಟಕ್ಕೆ ಬರುತ್ತದೆಂಬುದನ್ನು ನಿರೀಕ್ಷಣೆ ಮಾಡಬಹುದು. ಆ ಮಟ್ಟಕ್ಕಿಂತಲೂ ಕೆಳಗೆ ಮನೆಗಳನ್ನು ಕಟ್ಟುವುದಕ್ಕೆ ಮುನಿಸಿಪಾಲಿಟಿಯವರು ಖಂಡಿತವಾಗಿಯೂ ಲೈಸೆನ್ಸ್ ಕೊಡಬಾರದು.

ಒಬ್ಬ ಸದಸ್ಯರು.—ಅದಕ್ಕೆ ಲೈಸೆನ್ಸ್ ಕೊಟ್ಟವರಾರು?

Sri S. SRINIVASA IYENGAR.—Licence was given under the Cinematograph Act. It is not the Municipality which gave the licence.

ಶ್ರೀ ಕೆ. ಹನುಮಂತಯ್ಯ.—ಈಗಲಾದರೂ ಪಾಠ ಕಲಿತು, ಹಳ್ಳಿಗಳಲ್ಲಾಗಲಿ ಪಟ್ಟಣಗಳಲ್ಲಾಗಲಿ ಯಾವ ಯಾವ ಜಾಗಗಳಲ್ಲಿ ಮನೆಗಳು ಪ್ರವಾಹದಿಂದ ಕುಸಿದು ಬಿದ್ದಿವೆಯೋ ಅಂಥ ಜಾಗಗಳಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಲೈಸನ್ಸನ್ನೂ ಮತ್ತು ಅವಕಾಶವನ್ನೂ ಕೊಡಬಾರದು. ಟಿ.—ನರಸೀಪುರಕ್ಕೆ ಸರ್ಕಾರದವರು ಹತ್ತು ಸಾವಿರ ರೂಪಾಯಿಗಳನ್ನು ಯಾವ ಉದ್ದೇಶಕ್ಕಾಗಿ ಕೊಟ್ಟಿದ್ದಾರೋ ಅದೇ ಉದ್ದೇಶಕ್ಕಾಗಿ ಹಾಗೆಯೇ ನಂಜನಗೂಡು ತಾಲ್ಲೂಕಿಗೂ ಒದಗಿಸಲಾಗುತ್ತದೆ. ಈಗ ಮನೆಗಳನ್ನು ಕಳೆದುಕೊಂಡಿರುವವರಿಗೆ ಬೇರೆ ಕಡೆ ಸೈಟುಗಳನ್ನು ಕೊಟ್ಟು, ಮುನಿಸಿಪಾಲಿಟಿಯವರು ಸಹಕರಿಸಿ, ಶ್ರೀ ಶ್ರೀನಿವಾಸಯ್ಯಂಗಾರ್ಯರು ಹೇಳಿರುವಂತೆ ಬೇರೆ ಕಡೆ ಊರನ್ನು ಕಟ್ಟಬೇಕು. ಇದೇ ರೀತಿ ನಂಜನಗೂಡು ತಾಲ್ಲೂಕಿನಲ್ಲಿಯೂ ಮಾಡಬೇಕು. ಅಲ್ಲಿಗೂ ಕೂಡ ಹತ್ತುಸಾವಿರ ರೂಪಾಯಿಗಳನ್ನು ಕೊಡುತ್ತೇನೆಂದು ಸರ್ಕಾರದ ಪರವಾಗಿ ವಾಗ್ದಾನ ಮಾಡುತ್ತೇನೆ. ಹಳ್ಳಿಗಳಲ್ಲಿ ಯಾವ ಯಾವ ಕಡೆ ಮನೆಗಳು ಕುಸಿದುಬಿದ್ದಿವೆಯೋ ಅಲ್ಲಿಯೂ ಸೂಕ್ತ ಪರಿಹಾರ ಕೊಡಬೇಕೆಂದು ನಾನು ಈಗಾಗಲೇ ಡೆಪ್ಯುಟಿ ಕಮೀಷನರಿಗೆ ಹೇಳಿದ್ದೇನೆ.

ನಂಜನಗೂಡು ಮತ್ತು ಟಿ.—ನರಸೀಪುರದ ಮುನಿಸಿಪಾಲಿಟಿಯವರಿಗೆ ಕೊಡಬೇಕಾದ ಇನ್ನೊಂದು ಸೂಚನೆಯಿದೆ. ಸಾಧಾರಣವಾಗಿ, ಪವಿತ್ರವಾದ ನದಿಗಳಿರುವ ಕಡೆ ಬಚ್ಚಲು ನೀರುಹೋಗಿ ನದಿಗೆ ಬೀಳುತ್ತದೆ. ಇದು ಬಹಳ ವ್ಯಸನಕರವಾದ ಸಂಗತಿಯೆಂದು ಹೇಳಬಹುದು. ಎಲ್ಲಿ ಕೆಳಮಟ್ಟದಲ್ಲಿರುವ ಮನೆಗಳು ಕುಸಿದು ಬೀಳುತ್ತವೆಯೋ ಅಲ್ಲಿ ಬಚ್ಚಲು ನೀರಿನಿಂದ 'ಸ್ಯೂಯೇಜ್ ಫಾರಂ' ಮಾಡಿದರೆ ಒಳ್ಳೆಯದು. ಹಾಗೆ ಮಾಡಿದರೆ, ಅಲ್ಲಿನ ಮುನಿಸಿಪಾಲಿಟಿಗೂ ಆದಾಯ ಬರಲು ಮಾರ್ಗವಾಗುತ್ತದೆ, ಅಲ್ಲದೆ, ನದಿಯ ನೀರು ಕೆಡುವ ಪರಿಸ್ಥಿತಿಯೂ ತಪ್ಪುತ್ತದೆ. ಈ ಎರಡು ವಿಷಯಗಳನ್ನೂ ಸಂಯೋಜಿಸಿ ಕೆಲಸಮಾಡಬೇಕೆಂದು ಆಯಾ ಮುನಿಸಿಪಾಲಿಟಿಗೆ ಸಲಹೆಮಾಡುತ್ತೇನೆ. ಇದನ್ನು ಅವರು ಕಾರ್ಯ ರೂಪಕ್ಕೆ ತರಬೇಕೆಂದು ಸೂಚಿಸುತ್ತೇನೆ.

Sri S. SRINIVASA IYENGAR.—We have already done it. We have provided for a septic tank.

ಶ್ರೀ ಕೆ. ಹನುಮಂತಯ್ಯ.—ಗದ್ದೆಗಳ ವಿಷಯದಲ್ಲಿ ಅನೇಕ ಸದಸ್ಯರು ಮಾತನಾಡಿದ್ದಾರೆ. ಕಪಿಲಾನದಿ ಪ್ರವಾಹ ಬಂದರೆ ಮಕ್ಕಲುಮಣ್ಣು ಬರುತ್ತದೆ, ಇದರಿಂದ ಭೂಮಿ ಫಲವತ್ತಾಗುತ್ತದೆಂದು ನಂಬಿಕೆಯಿದೆ. ಕಾವೇರಿನದಿ ಮರಳು ತರುತ್ತದೆಂದು ಹೇಳುತ್ತಾರೆ. ಒಟ್ಟಿನಲ್ಲಿ, ಪ್ರವಾಹದ ದೆಸೆಯಿಂದ ಯಾವ ಯಾವ ಗದ್ದೆಗಳು ಮುಳುಗಿ ನಷ್ಟವಾಗಿ ಬಿತ್ತನೆ ಬತ್ತವನ್ನು ಕೇಳುತ್ತಾರೆಯೋ ಅವರಿಗೆ ಅದನ್ನು ಕೊಡುವಂತೆ ಸರ್ಕಾರದ ಆಜ್ಞೆ ಆ ದಿವಸವೇ ಹೊರಟಿದೆ. ಸ್ಥಳೀಯ ಅಧಿಕಾರಿಗಳು ಈ ಸಂಬಂಧವಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ. ಮನೆಯ ವಿಷಯದಲ್ಲಾಗಲಿ ಭೂಮಿಯ ವಿಷಯದಲ್ಲಾಗಲಿ ಎಲ್ಲ ಮಾಲೀಕರೂ ಬಡವರೆಂದು ಹೇಳುವುದಕ್ಕಾಗುವುದಿಲ್ಲ. ಅವರಲ್ಲಿ ಅನುಕೂಲಸ್ಥರೂ ಸಾಹುಕಾರರೂ ಇರಬಹುದು. ಇವರನ್ನು ಬಿಟ್ಟು ನಿಜವಾಗಿ ನಿರ್ಗತಿಕರಾಗಿರುವವರಿಗೆ ಸರ್ಕಾರದವರೂ ಸಾರ್ವಜನಿಕರೂ ಸಹಾಯ ಕೊಡುವುದು ನ್ಯಾಯ, ಆ ರೀತಿ ಮಾಡಬಹುದು ಈ ಎರಡು ತಾಲ್ಲೂಕುಗಳಿಗೂ ರಿಲೀಫ್ ಕಮಿಟಿಗಳನ್ನು ಮಾಡಿಕೊಂಡು ಆ ಕಮಿಟಿಯವರು ಎಲ್ಲವನ್ನೂ ಪರಿಶೀಲನೆಮಾಡಿ, ಶಿಫಾರಸು

ಮಾಡಿದರೆ, ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸರ್ಕಾರದವರು ಪ್ರಯತ್ನಪಡುತ್ತಾರೆ.

ಇನ್ನೊಂದು ವಿವಾದಾಸ್ಪದವಾದ ಪ್ರಶ್ನೆಯನ್ನು ಇಬ್ಬರು ಮಾನ್ಯ ಸದಸ್ಯರು ಪ್ರಸ್ತಾಪಮಾಡಿದರು. ನಾನು ಕೃಷ್ಣರಾಜಸಾಗರಕ್ಕೆ ಹೋದ ದಿವಸ ಅಲ್ಲಿನ ಇಂಜಿನಿಯರುಗಳನ್ನು ನಾನು ಕೇಳಿದುದೂ ಅದೇ ಪ್ರಶ್ನೆ. ಇದು ಸಾಮಾನ್ಯವಾಗಿ ಎಲ್ಲರಿಗೂ ಹೊಳೆಯುವ ಪ್ರಶ್ನೆ. ಏಕೆ ನೀವು ಪ್ರವಾಹವನ್ನು 'ರೆಗ್ಯುಲೇಟ್' ಮಾಡಿ, ಹೆಚ್ಚು ನೀರು ಬಾರದೇಯಿರುವ ಹಾಗೆ, ನಷ್ಟ ವಾಗದೇಯಿರುವ ಹಾಗೆ ಮಾಡಬಾರದು ಎಂದು ಅಲ್ಲಿನ ಎಗ್ಸಿಕ್ಯುಟಿವ್ ಇಂಜಿನಿಯರನ್ನು ಕೇಳಿದೆ. ಅವರು ಅದಕ್ಕೆ ಉತ್ತರವನ್ನೂ ಹೇಳಿದರು. ಅದು ತಪ್ಪಿರಲಾರದೆಂದು ನನ್ನ ಅಭಿಪ್ರಾಯ. ಅಲ್ಲಿರತಕ್ಕ ಅಧಿಕಾರಿಗಳು inefficient ಎಂದು ಮುಂತಾದ ಇನ್ನೂ ಕೆಲವು ಪದಗಳನ್ನು ಅವರ ವಿಷಯದಲ್ಲಿ ಅವರು ಸದಸ್ಯರು ಉಪಯೋಗಿಸಿದರು. ಆ ರೀತಿಯ ಪದಗಳನ್ನುಪಯೋಗಿಸುವುದು ಯಾವ ಸಭೆಗಾಗಲಿ ಅಥವಾ ಮಾನ್ಯ ಸದಸ್ಯರಿಗಾಗಲಿ ಅಷ್ಟು ಒಳ್ಳೆಯದಲ್ಲವೆಂದು ಮಾತ್ರ ಹೇಳಬಲ್ಲೆ. ನಾನು ಆ ದಿವಸ ಆ ಸ್ಥಳದಲ್ಲಿದ್ದು ಅಲ್ಲಿಯ ಇಂಜನಿಯರುಗಳು ಏನೇನು ಎಚ್ಚರಿಕೆಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಕೈಗೊಂಡಿದ್ದನ್ನು ನೋಡಿದ್ದೇನೆ. ಅಲ್ಲಿದ್ದ ಅಧಿಕಾರಿಗಳು ದಕ್ಷರೆಂಬ ವಿಚಾರದಲ್ಲಿ ಯಾವ ಸಂಶಯವೂ ಇಲ್ಲ. ನಾನೇ ಆ ದಿವಸ ಅಲ್ಲಿದ್ದು ಅವರು ಎಷ್ಟರಮಟ್ಟಿಗೆ ಎಚ್ಚರಿಕೆಯಿಂದ ಕೆಲಸಕಾರ್ಯಗಳನ್ನು ನಡೆಸುತ್ತಿದ್ದರೆಂಬುದನ್ನು ಸ್ವತಃ ನೋಡಿದ್ದೇನೆ. ಆದುದರಿಂದ ಅಲ್ಲಿರತಕ್ಕ ಎಗ್ಜಿಕ್ಯೂಟಿವ್ ಇಂಜನಿಯರ್ ಮತ್ತು ಸೂಪರಿಂಟೆಂಡಿಂಗ್ ಇಂಜನಿಯರವರು ಅಸಮರ್ಥರು ಎಂದು ಹೇಳುವುದು ಅಷ್ಟು ನ್ಯಾಯವಾದುದಲ್ಲವೆಂದು ನಾನು ಹೇಳುತ್ತೇನೆ. ಆ ಅಧಿಕಾರಿಗಳು ಹಗಲೂ ರಾತ್ರಿ ಎಲ್ಲಾ ಅಲ್ಲೇ ಕಾದಿದ್ದು ಫೋನ್ ಮೆಸೇಜುಗಳನ್ನು ಗಂಟೆ ಗಂಟೆಗೂ ಕಳುಹಿಸುತ್ತ ಅವರ ಕೈಲಾದ ಎಲ್ಲ ಎಚ್ಚರಿಕೆಗಳನ್ನೂ ತೆಗೆದುಕೊಂಡು ಕೆಲಸ ಮಾಡಿರುತ್ತಾರೆ. ಹೋದ ವರ್ಷ ಸರಿಯಾಗಿ ಮಳೆ ಬಾರದೆ ಕನ್ನಂಬಾಡಿ ಕಟ್ಟೆ ತುಂಬಲಿಲ್ಲ. ಆ ಒಂದು ಅನುಮಾನದಿಂದ ಕೆರೆ ಎಷ್ಟು ಬೇಗ ತುಂಬಿದರೆ ಅಷ್ಟೂ ಒಳ್ಳೆಯದೆಂದು ಅವರು ಭಾವಿಸಿ ಕೆಲಸ ಮಾಡಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—On a point of personal explanation, Sir. ನಾನು ಆ ರೀತಿಯಾಗಿ ಅವರು ಅಸಮರ್ಥರೆಂದು ಹೇಳಿರುವುದಿಲ್ಲ. ಅವರು ಮುನ್ನೆಚ್ಚರಿಕೆಯಿಂದ ಮಾತ್ರ ಕೆಲಸ ಮಾಡಿಲ್ಲವೆಂದು ಹೇಳಿರುತ್ತೇನೆ.

ಶ್ರೀ ಕೆ. ಹನುಮಂತಯ್ಯ.—ನಾನು ಹೀಗೆ "ಶ್ರೀ ಕೆ. ಪುಟ್ಟಸ್ವಾಮಿಯವರು ಆ ಅಧಿಕಾರಿಗಳನ್ನು ಅಸಮರ್ಥರೆಂದು ಹೇಳಿದ್ದಾರೆ" ಎಂಬುದಾಗೇನೂ ಹೇಳಲಿಲ್ಲ. You did not say that. ಆದರೆ ಆ 7ನೆಯ ತಾರೀಖಿನ ರಾತ್ರಿ ಅಲ್ಲಿ ಎಗ್ಜಿಕ್ಯುಟಿವ್ ಇಂಜನಿಯರ್ ಸ್ಥಳದಲ್ಲೇ ಇರಲಿಲ್ಲವೆಂದೂ ಮತ್ತು ಹಾಗೆ ಒಂದೇ ಸಲಕ್ಕೆ ಒಂದು ಲಕ್ಷ 64 ಸಾವಿರ ಕ್ಯೂಸೆಕ್ಸ್ ನೀರನ್ನು ಬಿಟ್ಟಿದ್ದರಿಂದಲೇ ಈ ಅನಾಹುತಗಳಿಗೆಲ್ಲಾ ಕಾರಣವಾಯಿತು, ಆದ್ದರಿಂದ ಅಂಥ ತಪ್ಪಿತಸ್ಥರು ಯಾರು ಯಾರಿದ್ದಾರೆಂಬುದನ್ನು ವಿಚಾರಣೆ ಮಾಡಿ ಎಂಬುದಾಗಿ ತಿಳಿಸಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಹೇಳಿದ್ದು ಹಾಗೆ ನೀರನ್ನು ವಿವೇಚನೆಯಿಲ್ಲದೆ ಶೇಖರಣೆ ಮಾಡಿ, ಅನಂತರ ಏಕ್‌ದಂ ಒಂದೇ ಸಲಕ್ಕೆ 2 ಲಕ್ಷ 25 ಸಾವಿರ ಕ್ಯೂಸೆಕ್ಸ್ ನೀರನ್ನು ಬಿಡದೆ ಇದ್ದರೆ ಇಂಥ ಅನಾಹುತಗಳಿಗೆ ಅವಕಾಶವಾಗುತ್ತಿರಲಿಲ್ಲವೆಂದು ಹೇಳಿದ್ದೇನೆ.

ಶ್ರೀ ಕೆ. ಹನುಮಂತಯ್ಯ.—I am dealing with that point. ನಾನು ಶ್ರೀ ಕೆ. ಪುಟ್ಟಸ್ವಾಮಿಯವರೇ ಆಗಲಿ ಅಥವಾ ಬೇರೆಯವರಾಗಲಿ ಹೀಗೆ ಹೇಳಿದರೆಂದೇನೂ ಹೇಳಿರುವುದಿಲ್ಲ. ಆದರೆ ಯಾರಿಗೇ ಆಗಲಿ ಕನ್ನಂಬಾಡಿ ಕಟ್ಟೆ ತುಂಬಿದರೆ ಸಾಕು, ಅದರಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆಂಬ ಆಸೆಯಿಂದ ಆ ಅಧಿಕಾರಿಗಳು ಹಾಗೆ ನೀರನ್ನು ಬೇಗ ಶೇಖರಣೆಯಾಗಲಿ ಎಂಬ ಒಂದೇ ಸದುದ್ದೇಶದಿಂದ ಹಾಗೆ ಮಾಡಿರುತ್ತಾರೆ. ಅವರು ಮಾಡುತ್ತಿರುವ ಕೆಲಸ ಬಹಳ ಇಕ್ಕಟ್ಟಿಗೆ ಸಿಕ್ಕಿಕೊಳ್ಳುವಂಥದ್ದಾಗಿದೆ. ಅವರು ನೀರನ್ನು ಹಾಗೆ ಶೇಖರಣೆ ಮಾಡದೆ ಬಿಟ್ಟು ಬಿಟ್ಟಿದ್ದರೆ ಆಗಲೂ ಸಹ ಅವರು ಏತಕ್ಕೆ ಹಾಗೆ ನೀರನ್ನು ಶೇಖರಣೆ ಮಾಡದೆ ಬಿಟ್ಟುಬಿಟ್ಟರು ಎಂಬ ಅಪಾದನೆಗೆ ಅವರನ್ನು ಗುರಿಮಾಡಬಹುದಾಗಿತ್ತು. ಆದರೆ ಈಗ ಅವರು ಹಾಗೆ ನೀರನ್ನು ಶೇಖರಣೆ ಮಾಡಿದ್ದರಿಂದ ಏತಕ್ಕಾಗಿ ಹೀಗೆ ಅಪಾರವಾಗಿ ನೀರನ್ನು ಶೇಖರಣೆ ಮಾಡಬೇಕಾಗಿತ್ತೆಂದು ಈಗಲೂ ಅವರ ಮೇಲೆ ಒಂದು ತಪ್ಪು ಹೊರಿಸಲು ಅವಕಾಶವಿದೆ. ಹೀಗೆ ಅವರು ನೀರನ್ನು ಶೇಖರಿಸಿದರೂ ಕಷ್ಟ, ಬಿಟ್ಟರೂ ಕಷ್ಟ. ಇಂಥ ಒಂದು ಇಕ್ಕಟ್ಟಿನ ಪರಿಸ್ಥಿತಿಗೆ ಅವರು ಗುರಿಯಾಗಿದ್ದಾರೆ. ಆದರೆ ಹೀಗೆಲ್ಲಾ ಅನಾಹುತಗಳಾಗಲಿ ಎಂಬ ಉದ್ದೇಶದಿಂದಲೇ ಅವರು ನೀರನ್ನು ಶೇಖರಣೆ ಮಾಡಿದರೆಂಬ ಅರ್ಥ ಬರುವಹಾಗೆ ಯಾರೂ ಹೇಳಬಾರದು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಯಾರು ಹಾಗೆ ಹೇಳಿದರು?

Sri K. HANUMANTHAIYA.—I did not interrupt when the Hon'ble Member was speaking. His interruption need not take the nature of a flood which he is condemning.

ಆ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಹಾಗೆ ಮಾಡಿದ್ದಾರೆ ಎಂಬ ಆರೋಪಣೆಯನ್ನು ಯಾರೂ ಮಾಡಿಲ್ಲವೆಂದೇ ಹೇಳೋಣ. ಆದರೆ ಅವರು ಎಷ್ಟನ್ನು ಬಿಡಬೇಕಾಗಿತ್ತು ಮತ್ತು ಅವರು ಎಷ್ಟು ನೀರನ್ನು ಬಿಟ್ಟಿದ್ದರು ಎಂಬುದೆಲ್ಲಾ that at least relates to a question of judgment. ಆದರೆ ಅದಕ್ಕೋಸ್ಕರವಾಗಿ ಈಗ ಪುನಃ ಮತ್ತೊಂದು ಸಮಿತಿಯನ್ನು ಏರ್ಪಾಡು ಮಾಡಬೇಕೆಂದು ಶ್ರೀ ಕೆ. ಪುಟ್ಟಸ್ವಾಮಿಯವರು ಹೇಳಿರುವುದನ್ನು ಸ್ವಾಗತಿಸೋಣ. ಪುನಃ ಮತ್ತೊಂದಾವರ್ತಿ ಎಗ್ಜಿಕ್ಯೂಟಿವ್ ಇಂಜನಿಯರ್ ಅವರನ್ನು ವಿಚಾರಣೆ ಮಾಡೋಣ. ಆದರೆ ಅಷ್ಟಕ್ಕೇ ಅಧಿಕಾರಿಗಳು ಈ ವಿಚಾರದಲ್ಲಿ ಅಸಮರ್ಥತೆಯಿಂದ ವರ್ತಿಸಿದ್ದಾರೆಂಬುದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆ ಅಧಿಕಾರಿಗಳು ಎಷ್ಟು ಎಚ್ಚರಿಕೆ ತೆಗೆದುಕೊಂಡು ಕೆಲಸಮಾಡಬೇಕೋ ಅಷ್ಟೂ ಎಚ್ಚರಿಕೆ ತೆಗೆದುಕೊಂಡು ಕೆಲಸಮಾಡಿದ್ದಾರೆ. ಈ ಅಂಶ ನಾನು ಕಣ್ಣಾರೆ ನೋಡಿದ್ದರಲ್ಲಿ ವ್ಯಕ್ತಪಟ್ಟಿದೆ. ಆದರೂ ಪುನಃ ಈ ವಿಚಾರವನ್ನು ವಿಮರ್ಶೆಮಾಡಬೇಕೆಂದರೆ ಅದನ್ನೂ ಮಾಡೋಣ. ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ.

(ಶ್ರೀ ಕೆ. ಹನುಮಂತಯ್ಯ.)

ಮೈಸೂರು ಜಿಲ್ಲೆಯ ಡೆಪ್ಯುಟಿ ಕಮಿಷನರೂ ಮತ್ತು ಮೈಸೂರು ಸಬ್‌ಡಿವಿಜನ್ನಿನ ಸಬ್-ಡಿವಿಜನ್ ಅಧಿಕಾರಿಗಳೂ ಮತ್ತು ತಾಲ್ಲೂಕು ಅಮಲ್ದಾರರುಗಳೆಲ್ಲರೂ ಈ ವಿಚಾರದಲ್ಲಿ ಏನೇನು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿತ್ತೊ ಅವುಗಳನ್ನೆಲ್ಲ ಕೈಕೊಂಡಿರುತ್ತಾರೆ. ಹಾಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಈಗಾಗಲೇ ಅವರುಗಳಿಗೆಲ್ಲಾ ಸರ್ಕಾರದಿಂದ ತಿಳಿವಳಿಕೆಗಳು ಕೂಡ ಹೋಗಿರುತ್ತವೆ. ಇನ್ನು ಮುಂದೆ ಈ ವಿಚಾರದಲ್ಲಿ ಏನೇನು ಮಾಡಬೇಕೆಂಬ ಬಗ್ಗೆ ಆಯಾ ತಾಲ್ಲೂಕಿಗೆ ಸಂಬಂಧಪಟ್ಟವರು ಮತ್ತು ಈ ಶಾಸನ ಸಭಾ ಸದಸ್ಯರುಗಳು ಮತ್ತು ಸಾರ್ವಜನಿಕರಿಂದೊಡಗೂಡಿದ ಒಂದು ರಿಲೀಫ್ ಸಮಿತಿಯನ್ನು ರಚಿಸಿ ಆ ಸಮಿತಿ ಸೂಚಿಸಬಹುದಾದ ಸಲಹೆಗಳಿಗೆ ಅನುಗುಣವಾಗಿ ಸೂಕ್ತ ಪರಿಹಾರಗಳನ್ನು ಸರ್ಕಾರದವರೂ ಮತ್ತು ಇತರ ಸಾರ್ವಜನಿಕರೂ ನೀಡತಕ್ಕದ್ದು ಯುಕ್ತವಾಗಿರುತ್ತದೆ. ಹೀಗೆ ಮಾಡಬೇಕೆಂಬ ವಿಷಯದಲ್ಲಿ ತಾವೀಗ ಕೆಲವು ಸೂಚನೆಗಳನ್ನು ನೀಡಿರತಕ್ಕದ್ದು ಸರ್ಕಾರದವರು ಬೇಗ ಒಂದು ತೀರ್ಮಾನಕ್ಕೆ ಬರಲು ಬಹಳ ಒಳ್ಳೆಯದಾಯಿತೆಂದು ನಾನು ಹೇಳಬಯಸುತ್ತೇನೆ.

ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಅವರ ನಿಲುವಳಿ ಸೂಚನೆಯಲ್ಲಿ ಕಪಿನಿ ನದಿಗೆ ಅಣೆಕಟ್ಟು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಶ್ರೀ ಕೆ. ಪುಟ್ಟಸ್ವಾಮಿಯವರೂ ಸಹ ಇದನ್ನು ಪ್ರಸ್ತಾಪಿಸಿದ್ದಾರೆ. ಅಂಥ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಬೇಕಾದದ್ದು ಸರ್ಕಾರದವರ ಕರ್ತವ್ಯವಾಗಿದೆಯೆಂಬುದನ್ನೇನೋ ಒಪ್ಪಿಕೊಳ್ಳೋಣ. ಆದರೆ ನಮಗೆ ಈ ದಿವಸ ಮುಖ್ಯವಾಗಿ ಬೇಕಾಗಿರುವುದು ದುಡ್ಡು. ಈಗಾಗಲೇ ನಮ್ಮಲ್ಲಿ ಪಾಂಚವಾರ್ಷಿಕ ಯೋಜನೆ ಇದೆ. ಇದಕ್ಕಾಗಿ ಈಗ 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಈಗಿರತಕ್ಕ ಪಂಚವಾರ್ಷಿಕ ಯೋಜನೆಯಲ್ಲಿ ಆ ಕಪಿನಿ ಪ್ರಾಜೆಕ್ಟ್ ಸೇರಿರುವುದಿಲ್ಲ. ಆದರೆ ಭದ್ರಾ ಪ್ರಾಜೆಕ್ಟ್ ಸೇರಿದೆ. ಅದು ಈ ಯೋಜನೆಯಲ್ಲಿ ಸೇರಿದ್ದರೂ ಕೂಡ ಅದನ್ನು ತ್ವರಿತವಾಗಿ ಪೂರೈಸಲು ಹಣ ಒದಗಿಸುವುದೇ ತುಂಬ ಕಷ್ಟವಾಗಿದೆ. ಹೀಗೆ ನಾವೇನು ಈ ಪಾಂಚವಾರ್ಷಿಕ ಯೋಜನೆಯಲ್ಲಿ ಕೈಕೊಂಡಿರುವ ಕೆಲಸಗಳೆಲ್ಲವನ್ನೂ ಮೊಟ್ಟಮೊದಲು ಪೂರೈಸಿ, ಅನಂತರ ಬೇರೆ ಕೆಲಸಗಳನ್ನು ಕೈಗೊಳ್ಳಬೇಕೇ ಹೊರತು ಈಗ ಸದ್ಯಕ್ಕೆ ಯಾವ ಹೊಸ ಕೆಲಸಗಳನ್ನೂ ಕೈಕೊಳ್ಳಕೂಡದೆಂಬ ನಿರ್ಬಂಧವನ್ನು ಕೇಂದ್ರದವರು ಹಾಕಿದ್ದಾರೆ. ಈ ಪಾಂಚವಾರ್ಷಿಕ ಯೋಜನೆಯಲ್ಲಿ ಇನ್ನು 3 ವರ್ಷಗಳ ಕಾಲ ಮಾತ್ರ ಉಳಿದಿದೆ. ಈ ಅವಧಿಯಲ್ಲಿ ಈ ಹೊಸ ಕೆಲಸವನ್ನು ಕೈಗೊಳ್ಳುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಮೈಸೂರು ಸರ್ಕಾರದವರೇನಾದರೂ ಮನಸ್ಸು ಮಾಡುವುದಾಗಿದ್ದರೂ, ಇದಕ್ಕೆ ಇಂಡಿಯಾ ಸರ್ಕಾರದವರು ಈಗಿರತಕ್ಕ ಪಾಂಚವಾರ್ಷಿಕ ಯೋಜನೆ ಪೂರೈಸದ ವಿನಾ ಇದನ್ನು ತೆಗೆದುಕೊಳ್ಳಕೂಡದೆಂಬ ನಿರ್ಬಂಧ ಹಾಕುತ್ತಾರೆ. ಅದನ್ನೂ ಇದನ್ನೂ ಬೆರಸಿ ಕಲಸುಮೇಲೋಗರ ಮಾಡಬಾರದೆಂಬುದು ಅವರ ವಾದ. ಆ ವಾದದಲ್ಲಿ ಸ್ವಲ್ಪ ತಿರುಳೂ ಸಹ ಇದೆ. ಆದಕಾರಣ ಈ ಕಪಿನಿ ಪ್ರಾಜೆಕ್ಟನ್ನು ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳಲು ಪ್ರಯತ್ನಪಡಬೇಕಾಗಿದೆ.

ಇನ್ನು ಎರಡನೆಯದಾಗಿ ಮೈಸೂರಿನಲ್ಲಿ ಕೆಲವು ಬೇರೆ ಬೇರೆ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿದೆ. ಅವುಗಳನ್ನೂ ಸಹ ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಡಬೇಕಾಗಿದೆ. ಈಗ ಈ ಮಾನ್ಯ ಸಭೆಯವರು ಕೊಟ್ಟಿರತಕ್ಕ ಎಲ್ಲಾ ಸಲಹೆಗಳನ್ನೂ ಗಮನದಲ್ಲಿಟ್ಟುಕೊಂಡು, ಆ ಉದ್ಯಮಗಳನ್ನೆಲ್ಲಾ ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕಾಗಿದೆ. ಆ ರೀತಿ ಸೇರಿಸಲು ಪ್ರಯತ್ನಪಡೋಣ.

Sri L. SIDDAPPA.—Very recently an assurance was given by the Member and the Minister of the Union Government that the Bhadra Original Project will be completed during this five-year period.

ಶ್ರೀ ಕೆ. ಹನುಮಂತಯ್ಯ.—ಆ ರೀತಿಯಲ್ಲಿ ರಾಮಮೂರ್ತಿ ಸಮಿತಿಯವರು ವರದಿ ಮಾಡಿದ್ದಾರೆ. ತಾವು ಹೇಳುತ್ತಿರುವುದು ನಿಜ. ಆದರೆ ಅದನ್ನಿನ್ನೂ ಜನರಲ್ ಪ್ಲಾನಿಂಗ್ ಸಮಿತಿಯವರು ಒಪ್ಪಿಲ್ಲ. ಆ ವಿಚಾರವಿನ್ನೂ ವ್ಯವಹಾರದಲ್ಲೇ ಇದೆ. ಹೋದ ಸಲ ನಾನು ಡೆಲ್ಲಿಗೆ ಹೋಗಿದ್ದಾಗಲೂ ಸಹ ಪ್ರೈಂ ಮಿನಿಸ್ಟರವರಿಗೆ ಈ ವಿಚಾರವಾಗಿ ಕಾಗದಪತ್ರಗಳನ್ನು ನಾನು ಬರೆದಿದ್ದೆ—ಈ ವಿಚಾರವನ್ನು ಅವರೊಡನೆಯೂ ಮತ್ತು ಪ್ಲಾನಿಂಗ್ ಸಮಿತಿಯವರೊಂದಿಗೂ ಚರ್ಚೆ ಮಾಡಿದ್ದೇನೆ. ಆದರೆ ಅವರು ಆ ರಾಮಮೂರ್ತಿ ಸಮಿತಿಯವರ ತೀರ್ಮಾನದ ಬಗ್ಗೆ ಏನು ಸಲಹೆ ಮಾಡಿದ್ದಾರೆಂಬ ವಿಚಾರ ತಿಳಿದಿಲ್ಲ. ಆ ಸಮಿತಿಯವರ ಸಲಹೆಗಳನ್ನು ಜಾರಿಗೆತರಬೇಕಾದರೆ ಸುಮಾರು 2 ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಅಷ್ಟು ಕೆಲಸಕಾರ್ಯಗಳು ಈಗ ಈ ಪಾಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿವೆ. ಈ ಉದ್ಯಮಗಳ ಜೊತೆಗೆ ಮತ್ತೆ ಕೆಲವು ಹೊಸ ಉದ್ಯಮಗಳನ್ನು ಕೈಕೊಂಡರೆ ಆಗ ಇನ್ನೆಷ್ಟು ಕೋಟಿ ರೂಪಾಯಿಗಳ ಹಣ ಹೆಚ್ಚಿಗೆ ಶೇಖರಣೆಯಾಗಬೇಕಾಗುತ್ತದೆಯೋ ಅದು ತಿಳಿಯದಾಗಿದೆ. ಆದರೆ ಹೊಸ ಹೊಸ ಯೋಜನೆಗಳನ್ನು ಕೈಕೊಳ್ಳಬೇಕೆಂದಿದ್ದರೂ, ಅವರೂ ಹಣದ ಅಭಾವದಿಂದ ಸುಮ್ಮನಿರಬೇಕಾಗಿದೆ. ಈ ಹಣದ ಅಭಾವವಿರುವಾಗ ಮಾಡಬೇಕಾಗಿರುವ ಕೆಲಸಗಳಿಗೇ ಸರಿಯಾಗಿ ಸಕಾಲಕ್ಕೆ ಹಣವನ್ನು ಒದಗಿ ದೆ ಇದ್ದರೆ ಈಗ ಮಂಜೂರಾಗಿರುವ ಕೆಲಸಗಳನ್ನು ಪೂರೈಸುವುದಾದರೂ ಹೇಗೆ ? ಈಗ ಕೈಗೊಂಡಿರುವ ಕೆಲಸಕಾರ್ಯಗಳಿಗೇನೆ ಹಣವನ್ನು ಶೇಖರಣೆ ಮಾಡಲು ಕಷ್ಟವಾಗಿದೆಯೆಂದು ಅವರು ವಾದ ಹೂಡುತ್ತಿದ್ದಾರೆ. ಈಗ ಅವರು ಕೈಗೊಂಡಿರತಕ್ಕ ಈ ಪಂಚವಾರ್ಷಿಕ ಯೋಜನೆಗಾಗಿ 2 ಸಹಸ್ರ ಕೋಟಿ ರೂಪಾಯಿಗಳ ಸಾಲವನ್ನೆತ್ತಬೇಕಾಗಿದೆ. ಹಾಗೆ ಸಾಲವನ್ನೆತ್ತಿ ಅವರು ನಮ್ಮ ಕೆಲಸಗಳಿಗೂ ಹಣವನ್ನೊದಗಿಸಬೇಕಾಗಿದೆ. ನಾವೂ ಸಹ ಈಗ 9 ಕೋಟಿ ರೂಪಾಯಿಗಳ ಸಾಲವನ್ನೆತ ಬೇಕೆಂದು ಹೊರಟಿದ್ದೇವೆ. ಈಗಾಗಲೇ ಆ ಬಗ್ಗೆ 3 ಕೋಟಿ ರೂಪಾಯಿಗಳ ಸಾಲವನ್ನೆತ್ತುವುದಕ್ಕೆ ಕೈಹಾಕಿದ್ದೇವೆ. ಈಗ ನಾವು ಇಲ್ಲಿ ಕೈಕೊಂಡಿರತಕ್ಕ ಪಾಂಚವಾರ್ಷಿಕ ಯೋಜನೆಗೆ ದುಡ್ಡು ಎಷ್ಟು ಬೇಕಾಗುತ್ತದೆ. ಇಂಡಿಯಾ ಸರ್ಕಾರದವರಿಂದ ನಮಗೇನು ದ್ರವ್ಯ ಸಹಾಯ ದೊರೆಯುತ್ತದೆ ಎಂಬುದನ್ನು ನೋಡಿಕೊಂಡು ಅನಂತರ ನಾವು ಕೆಲಸ ಪೂರೈಸಬೇಕಾಗಿದೆ. ಆದುದ

ರಿಂದ ಆ ಪ್ಲಾನಿಂಗ್ ಸಮಿತಿಯವರು ಹೇಳತಕ್ಕದ್ದರಲ್ಲಿ ಒಂದು ಸತ್ಯಾಂಶ ಕೂಡ ಇದೆ. ಈ ಎಲ್ಲ ಕಾರಣಗಳಿಂದ ಕಪಿಲಿ ಪ್ರಾಜೆಕ್ಟನ್ನು ಈ ಮೊದಲನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳಲು ಸಾಧ್ಯವೇ ಇಲ್ಲ. ಇದನ್ನು ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಿ ಮಾತ್ರ ಸೇರಿಸಲು ಪ್ರಯತ್ನಗಳನ್ನು ಮಾಡಬೇಕಾಗಿದೆ.

ಇದು ಈ ಸಭೆ ಸೇರಿದಮೇಲೆ ಬಂದಿರುವ ಮೊದಲನೆಯ ನಿಲುವಳಿ ಸೂಚನೆ.

Sri J. MOHAMED IMAM.—And it won't be the last.

Mr. SPEAKER.—Let us wait and see.

ಶ್ರೀ ಕೆ. ಹನುಮಂತಯ್ಯ.—ಹೀಗೆ, ಮೊದಲನೆಯ ನಿಲುವಳಿ ಸೂಚನೆಯನ್ನು ತಂದ ಮಾನ್ಯ ಸದಸ್ಯರು ಇಂದು ಬಹಳ ಸಮರಸವಾಗಿಯೇ ಮಾತನಾಡಿದ್ದಾರೆನ್ನಬೇಕು. ಅಲ್ಲದೆ ಒಟ್ಟಿನಮೇಲೆ, ಇದನ್ನು ಸಮರ್ಥಿಸಿ ಮಾತನಾಡಿದ ಮಾನ್ಯ ಸದಸ್ಯರುಗಳು ಕೂಡ ಅದೇರೀತಿಯಾಗಿ ಮಾತನಾಡಿದ್ದಾರೆಂದು ಹೇಳಬಹುದು. ಒಟ್ಟಿನಲ್ಲಿ ಇದೊಂದು ರೀತಿಯಲ್ಲಿ ಒಳ್ಳೆಯ ಸಂಪ್ರದಾಯವನ್ನು ಹಾಕಿಕೊಟ್ಟಿದ್ದಾರೆ. ಈ ಸತ್ಸಂಪ್ರದಾಯ ಸಮರಸತೆ ಬೆಳೆಯುವಂತೆ ತಾವುಗಳು ಮಾಡಬೇಕು. ಮುಖ್ಯವಾಗಿ ಈ ದಿವಸದ ವಿಷಯವನ್ನು ನೋಡುವುದಾದರೆ, ಅದರಲ್ಲಿ ಚರ್ಚಾಸ್ಪದವಾದ ವಿಷಯವೇನಿಲ್ಲ. ಮಾನ್ಯ ಸದಸ್ಯರು ಹೇಳಿದ್ದೆಲ್ಲವನ್ನೂ ಒಪ್ಪಿದ್ದೇನೆ. ಸರ್ಕಾರದವರೂ ಕೈಲಾದ ಸಹಾಯವನ್ನೆಲ್ಲಾ ಮಾಡುತ್ತಿದ್ದಾರೆ, ಮಾಡಬೇಕೆಂದೂ ಇದ್ದಾರೆ. ಆದ್ದರಿಂದ, ಕೊನೆಯದಾಗಿ ಈ ರೀತಿಯ ಸಮರಸ ಭಾವನೆಯನ್ನು, ಸತ್ಸಂಪ್ರದಾಯವನ್ನು ಬೆಳೆಯುವಂತೆ ಮಾಡಲು ಈ ನಿಲುವಳಿ ಸೂಚನೆಯನ್ನು ಸೂಚಿಸಿದ ಮಾನ್ಯ ಸದಸ್ಯರು ತಮ್ಮ ಸೂಚನೆಯನ್ನು ಒತ್ತಾಯಮಾಡದೆ ವಾಪಸು ತೆಗೆದುಕೊಳ್ಳುವುದು ಒಳ್ಳೆಯದೆಂದು ನಾನು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಸರ್ಕಾರದವರು ಕೊಟ್ಟಿರತಕ್ಕ ಭರವಸೆಯಿಂದ ನಾನು ಈ ಸೂಚನೆಯನ್ನು ವಾಪಸು ತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

The Adjournment Motion was, by leave, withdrawn.

Mr. SPEAKER.—The House will now stand adjourned to meet tomorrow at 12 NOON.

The House adjourned at Twenty-two Minutes past Five of the Clock to meet again at Twelve of the Clock on Tuesday, the 14th July 1953.

WD 4516 GPB—500—3-2-54